ಸಂಪುಟ : 10 ಸಂಚಿಕೆ: 34 ಪುಟ : 4+2 ಬೆಲೆ: 3.00 ಬುಧವಾರ ಮಾರ್ಚ್ 5 2025 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 10 Issue : 34 Pages : 4+2 Price : 3.00 Wednesday March 5 2025 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಯುವ ಕಾಂಗ್ರೆಸ್ ಉಪಾಧ್ಯಕ್ಷರಾಗಿ ಆಯ್ಕೆ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಯುವ ಕಾಂಗ್ರೆಸ್‌ಗೆ ಜರುಗಿದ ಚುನಾವಣೆಯಲ್ಲಿ ವಾಣಿ ಹಿರೇಮಠ ಗದಗ ಜಿಲ್ಲಾ ಯುವ ಕಾಂಗ್ರೆಸ್‌ನ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ವಾಣಿ ಹಿರೇಮಠರವರಿಗೆ ಕಾನೂನು, ಸಂಸದೀಯ ವ್ಯವಹಾರ ಪ್ರವಾಸೋದ್ಯಮ ಸಚಿವರಾದ ಡಾ. ಎಚ್.ಕೆ. ಪಾಟೀಲ, ಮಾಜಿ ಶಾಸಕರಾದ ಡಿ.ಆರ್. ಪಾಟೀಲ, ರೋಣ ಮತಕ್ಷೇತ್ರದ ಶಾಸಕರು, ಖನಿಜ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರಾದ ಜಿ.ಎಸ್. ಪಾಟೀಲ, ಗದಗ ಜಿಲ್ಲಾ ಯುವ ಕಾಂಗ್ರೆಸ್‌ನ ಅಧ್ಯಕ್ಷರಾದ ಕೃಷ್ಣಗೌಡ ಎಚ್.ಪಾಟೀಲ, ಬಿ.ಬಿ. ಅಸೂಟಿ, ಅಶೋಕ ಮಂದಾಲಿ, ಸುಜಾತಾ ದೊಡ್ಡಮನಿ, ನೀಲಮ್ಮಾ ಬೋಳನವರ, ಬಸವರಾಜ ಕಡೇಮನಿ, ದೇವರಾಜ ಬಾರಕೇರ, ಶಕುಂತಲಾ ಅಕ್ಕಿ, ಮೀನಾಕ್ಷಿ ಬೆನಕಣ್ಣನವರ, ಜಾನಕಿ ಮಲ್ಲಾಪೂರ, ರುದ್ರಮ್ಮಾ ಕೆರಕಲಮಟ್ಟಿ, ವೀಣಾ ಕಟ್ನಳ್ಳಿ, ಕುಸುಮಾ ಬೆಳಗಟ್ಟಿ, ಲೀಲಾ ಸಂಕಣ್ಣವರ ಮುಂತಾದವರು ಅಭಿನಂದನೆ ಸಲ್ಲಿಸಿ, ಇವರ ಅಧಿಕಾರಾವಧಿಯಲ್ಲಿ ಕಾಂಗ್ರೆಸ್ ಪಕ್ಷವನ್ನು ಇನ್ನೂ ಅತ್ಯುತ್ತಮವಾಗಿ ಸಂಘಟಿಸುವಂತಾಗಲಿ ಎಂದು ಶುಭ ಹಾರೈಸಿದ್ದಾರೆ.

### ಕುಮಾರ ಮಹಾರಾಜರಿಗೆ ಸೂಕ್ತ ರಕ್ಷಣೆ ಒದಗಿಸಲು ಆದ್ರಳ್ಳಿ ಗ್ರಾಮದ ಮಹಿಳೆಯರಿಂದ ಮನವಿ

# ಶ್ರೀಗಳ ಪರ ಹೋರಾಟಕ್ಕೆ ತಾವು ಸಿದ್ಧ

■ವಿಜಯಸಾಕ್ಷಿ ಸುದ್ದಿ, ಲಕ್ಮೇಶ್ವರ

ಆದ್ರಳ್ಳಿ, ವಡ್ಡರಪಾಳಾ ಹಾಗೂ ನಾದಿಗಟ್ಟಿ ಗ್ರಾಮದ ಭೋವಿ ಸಮಾಜದ ಕೆಲವಷ್ಟು ಅಕ್ರಮ ದಂಧೆಕೋರರು, ಪುಂಡರು ಬಂಜಾರ ಸಮಾಜದ ಕುಮಾರ ಮಹಾರಾಜ ಸ್ವಾಮಿಗಳಿಗೆ ಗಡಿಪಾರಿಗೆ ಒತ್ತಾಯಿಸಿ ಬೆದರಿಕೆಯೊಡ್ಡುತ್ತಿದ್ದು, ಈ ಬಗ್ಗೆ ಪೊಲೀಸರು ಸೂಕ್ತ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿ ಮಂಗಳವಾರ ಸಂಜೆ ನೂರಾರು ಮಹಿಳೆಯರು ಲಕ್ಮೇಶ್ವರ ಪೊಲೀಸ್ ಠಾಣೆಗೆ ಆಗಮಿಸಿ ಮನವಿ ಸಲ್ಲಿಸಿದರು. ಈ ವೇಳೆ ಮಾತನಾಡಿದ ಆದ್ರಳ್ಳಿ ಗ್ರಾಮದ ಮಹಿಳೆಯರು ಆದ್ರಳ್ಳಿ ಗವಿಮಠದಲ್ಲಿ ನೆಲೆ ನಿಂತಿರುವ ಕುಮಾರ ಮಹಾರಾಜ ಶ್ರೀಗಳು ಗ್ರಾಮದ ಜನರ ಹಿತ, ಕಲ್ಯಾಣಕ್ಕಾಗಿ ಮತ್ತು ಇಲ್ಲಿನ ಜನರಿಗೆ ನೈತಿಕ ಬಲವಾಗಿ, ಬದುಕಿಗೆ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಆದರಹಳ್ಳಿ ಗ್ರಾಮದ ಸುತ್ತಮುತ್ತಲೂ ಅನೇಕ ವರ್ಷಗಳಿಂದ ಅವ್ಯಾಹತವಾಗಿ ನಡೆದುಕೊಂಡು ಬರುತ್ತಿರುವ ಅಕ್ರಮ ಕಲ್ಲು, ಮರಳು ಗಣಿಗಾರಿಕೆಯಿಂದ ಇಲ್ಲಿನ ಜನರು ಅನುಭವಿಸುತ್ತಿರುವ ಕಷ್ಟ-ನಷ್ಟ-ಅನ್ಯಾಯಗಳಿಗೆ ದನಿಯಾಗಿ ಶ್ರೀಗಳು ನಿಂತಿದ್ದಾರೆ. ಕೆಲವೊಂದು ಭೋವಿ ಸಮಾಜದ ದಂಧೆಕೋರರು, ಪುಂಡರು ಕುಮಾರ ಮಹಾರಾಜರಿಗೆ ಮಠವನ್ನು ಬಿಟ್ಟು ತೊಲಗಿ ಎಂದು ಜೀವ ಬೆದರಿಕೆಯ ಎಚ್ಚರಿಕೆ ನೀಡುತ್ತಿದ್ದಾರೆ. ಭೋವಿ, ಬಂಜಾರ, ಹರಿಜನ, ತಳವಾರ, ಲಿಂಗಾಯತ ಹೀಗೆ ಎಲ್ಲ ಸಮಾಜದವರು ಗ್ರಾಮದಲ್ಲಿ ಪರಸ್ಪರ ಅನ್ಯೋನ್ಯವಾಗಿದ್ದೇವೆ. ಸಮಾಜಗಳ ನಡುವೆ ಶಾಂತಿ ಕದಡುವ ಕೆಲಸ ಮಾಡುತ್ತಿದ್ದಾರೆ. ಇದರಿಂದಾಗಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಅವರು ಕುಗ್ಗಿದ್ದಾರೆ. ಕಾರಣ ಇದರಿಂದ ತಮ್ಮ ಅಕ್ರಮ ದಂಧೆಗೆ ಅಡ್ಡಿಯಾಗಿರುವ ಶ್ರೀಗಳ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡಿ ಅವರನ್ನು ಇಲ್ಲಿಂದ ತೆರವುಗೊಳಿಸುವ ದುರುದ್ದೇಶದಿಂದ ಕೆಲ ಪಟ್ಟಭದ್ರ ಹಿಸಾಸಕ್ತಿಗಳು ಷಡ್ಯಂತ್ರ ನಡೆಸುತ್ತಿದ್ದಾರೆ. ಶ್ರೀಗಳು ಮಠದಲ್ಲಿಯೇ ಇರಬೇಕು ಅದಕ್ಕಾಗಿ ಶ್ರೀಗಳ ಪರವಾದ ಹೋರಾಟಕ್ಕೆ ತಾವು ಸಿದ್ಧರಾಗಿದ್ದೇವೆ ಎಂದರು. ಲಂಬಾಣಿ ಸಮಾಜದ ಗೀತಾ ನಾಯಕ, ಶಾರದಾ ಕಾರಬಾರಿ, ಸತ್ಯಮ್ಮ ತಳವಾರ, ಚಿಗವ್ವ ತಳವಾರ, ಕಮಲವ್ವ ಪಾಟೀಲ್, ಬಸಮ್ಮ ಪಾಟೀಲ್, ನೀಲವ್ವ ಅಂಬಿಗೇರ, ಬಸವೇಣವ್ವ ಪಾಟೀಲ್, ಶಾರವ್ವ ಹರಿಜನ, ಉಡಚವ್ವ, ಹರಿಜನ ರತ್ನವ್ವ ತಳವಾರ, ಮಂಜವ್ವ ರಾಹುತ್ ನಿರ್ಮಲ ರಾಹುತ್, ಶಾಂತವ್ವ ಲಮಾಣಿ, ಶಿವಕ್ಕ ತಳವಾರ, ಗಂಗವ್ವ ಲಮಾಣಿ, ಸುಸವ್ವ ಲಮಾಣಿ, ರೇಣವ್ವ ಲಮಾಣಿ, ಸೇರಿದಂತೆ ನೂರಾರು ಮಹಿಳೆಯರು ಇದ್ದರು.



ಈ ಹಿನ್ನೆಲೆಯಲ್ಲಿ ಆದ್ರಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮದ ಭಕ್ತಾಧಿಗಳು ಮಾ.7ರಂದು ಆದ್ರಳ್ಳಿ ಗ್ರಾಮದಿಂದ ಗದಗ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಪಾದಯಾತ್ರೆ ಕೈಗೊಂಡು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುತ್ತೇವೆ. ಪೊಲೀಸ್ ಇಲಾಖೆ ಶ್ರೀಗಳಿಗೆ ಮತ್ತು ಭಕ್ತರಿಗೆಲ್ಲ ಸೂಕ್ತವಾದ ಕಾನೂನು ರಕ್ಷಣೆ ಕೊಡಬೇಕು ಎಂದು ಗ್ರಾಮಸ್ಥರು ವಿನಂತಿಸಿದರು.

ಪಿಎಸ್‌ಐ ನಾಗರಾಜ ಗಡಾದ ಹಾಗೂ ಅಪರಾಧ ವಿಭಾಗದ ಪಿಎಸ್‌ಐ ಟಿ.ಕೆ. ರಾಠೋಡ ಮನವಿ ಸ್ವೀಕರಿಸಿದರು.

## ಗದಗ ರಾಷ್ಟ್ರೀಯ ಘರಾನಾ ಸಮ್ಮೇಳನ ಇಂದು



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಶ್ರೀಅಡವೀಂದ್ರ ಸ್ವಾಮಿಗಳ ಮಠದಲ್ಲಿ ಶಿಷ್ಯ-ಪ್ರಶಿಷ್ಯರ ಸಂಘಟನೆಯಾದ ಗುರು ಪಂಚಾಕ್ಷರಿ ಸೇವಾ ಸಮಿತಿಯು ಗಾನಯೋಗಿ ಪಂಚಾಕ್ಷರಿ ಸಂಗೀತ ಪರಂಪರಾ ಉತ್ಸವ, ಪಂಚಾಕ್ಷರಿ ಗದಗ ರಾಷ್ಟ್ರೀಯ ಘರಾನಾ ಸಮ್ಮೇಳನವನ್ನು ಮಾರ್ಚ್ 5ರಂದು ಸಂಜೆ 4ರಿಂದ ರಾತ್ರಿ 9.30 ಗಂಟೆಯವರೆಗೆ ಹಮ್ಮಿಕೊಂಡಿದೆ.

ಮಾ. 5ರಂದು ನಡೆಯವ ಸಮಾರಂಭದಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಸಂಗೀತಗಾರರಾದ ಪದ್ಮಶ್ರೀ ಡಾ. ಎಂ.ವೆಂಕಟೇಶಕುಮಾರ, ಹಿರಿಯ ಪ್ರಸಿದ್ಧ ಸಂಗೀತಗಾರರಾದ ಡಾ. ಸಿದ್ರಾಮಯ್ಯ ಮಠಪತಿ ಅವರಿಂದ ಗಾಯನ, ಡಾ. ನಾರಾಯಣ ಅಕ್ಕಸಾಲಿ ಹಾಗೂ ಡಾ. ಗುರುಬಸವ ಮಹಾಮನಿ ಅವರಿಂದ ವಾಯಲಿನ್ ಜುಗಲ್‌ಬಂದಿ, ಡಾ.ಶಿವಬಸಯ್ಯ ಗಡ್ಡದಮಠ-ಗಾಯನ, ಕುಮಟಾದ ಶಾಸ್ತ್ರೀಯ ಸಂಗೀತ ಮತ್ತು ಸುಗಮ ಸಂಗೀತ ಕಲಾವಿದೆ ರೇಷ್ಮಾ ಭಟ್ಟ-ಗಾಯನ, ಧಾರವಾಡದ ಪ್ರಸಿದ್ಧ ತಬಲಾ ವಾದಕರಾದ ಶ್ರೀಧರ ಮಾಂಡ್ರೆ ಅವರಿಂದ ತಬಲಾ ಸೋಲೋ, ಪ್ರಸಿದ್ಧ ಯುವ ಬಾನ್ಸುರಿ ವಾದಕಿ ವಿಜಯಪುರದ ಕೃತಿಕಾ ಜಂಗಿನಮಠ ಅವರಿಂದ ಬಾನ್ಸುರಿ ವಾದನ, ಧಾರವಾಡ ಆಕಾಶವಾಣಿ 'ಎ' ಗ್ರೇಡ್ ತಬಲಾ ವಾದಕ ಪಂ.ಶರಣಕುಮಾರ ಗುತ್ತರಗಿ, ಪ್ರೊ. ಮೃತ್ಯುಂಜಯ ಮಠದ, ಡಾ. ಹನುಮಂತ ಕೊಡಗಾನೂರ, ಭೀಮಾಶಂಕರ ಬಿದನೂರು ಇವರುಗಳು ತಬಲಾ ಸಾಥ ನೀಡುವರು.

ಧಾರವಾಡದ ಯುವ ಹಾರ್ಮೋನಿಯಂ ವಾದಕ ಬಸವರಾಜ ಹಿರೇಮಠ ಹಾಗೂ ಸುಕ್ರಸಾಬ ಮುಲ್ಲಾ ಹಾರ್ಮೋನಿಯಂ ಸಾಥ್ ನೀಡುವರು ಎಂದು ಗುರು ಪಂಚಾಕ್ಷರಿ ಸೇವಾ ಸಮಿತಿ ಕಾರ್ಯದರ್ಶಿ ಎಂ.ಎಂ. ಶಿರೋಳಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶ್ರೀ ಧ.ಗ್ರಾ ಯೋಜನೆಯ 'ನಮ್ಮೂರು-ನಮ್ಮ ಕೆರೆ' ಯೋಜನೆಯಡಿ ಹೂಳೆತ್ತುವ ಕಾಮಗಾರಿಗೆ ಚಾಲನೆ

# ಕೆರೆಗಳ ಸಂರಕ್ಷಣೆಗೆ ಆದ್ಯತೆ ನೀಡಿ

■ವಿಜಯಸಾಕ್ಷಿ ಸುದ್ದಿ, ಗದಗ

ಕೆರೆ-ಕಟ್ಟೆಗಳು ಜನರ ಹಾಗೂ ಜಾನುವಾರುಗಳ ಜೀವನಾಡಿ. ಅವುಗಳ ಸಂರಕ್ಷಣೆಗೆ ಪ್ರತಿಯೊಬ್ಬರೂ ಆದ್ಯತೆ ನೀಡಬೇಕಿದೆ ಎಂದು ಕಳಸಾಪೂರ-ಮಲ್ಲಸಮುದ್ರ-ಸೊರಟೂರಿನ ಓಂಕಾರೇಶ್ವರ ಹಿರೇಮಠದ ಶ್ರೀ ಫಕ್ಕೀರೇಶ್ವರ ಪಟ್ಟಾಧ್ಯಕ್ಷರು ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಗದಗ ತಾಲೂಕು ಹುಯಿಲಗೋಳ ಗ್ರಾ.ಪಂ ಮತ್ತು ಕೆರೆ ಅಭಿವೃದ್ಧಿ ಸಮಿತಿ ಸಹಯೋಗದಿಂದ 'ನಮ್ಮೂರು-ನಮ್ಮ ಕೆರೆ' ಯೋಜನೆಯಡಿ ಹೂಳು ತೆಗೆಯುವ ಕಾಮಗಾರಿಗೆ ಚಾಲನೆ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಗ್ರಾಮಗಳಲ್ಲಿನ ಕೆರೆ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ಕೆರೆ ಸಂರಕ್ಷಣೆಯು ಭೂಮಿಯ ಮೇಲಿನ ಎಲ್ಲಾ ಪ್ರಾಣಿ-ಪಕ್ಷಿಗಳಿಗೂ, ಮನುಷ್ಯರಿಗೂ ಅನುಕೂಲಕರವಾಗಿದ್ದು, ಮುಂದಿನ ಪೀಳಿಗೆಗೆ ಅದನ್ನು ಸಂರಕ್ಷಣೆ ಮಾಡುವುದು ಮತ್ತು ಉಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

> ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ವೀರೇಂದ್ರ ಹೆಗ್ಗಡೆಯವರು ಮತ್ತು ಮಾತೋಶ್ರೀ ಹೇಮಾವತಿ ಅಮ್ಮನವರು ಕೆರೆ ಸಂರಕ್ಷಣೆ ಮೂಲಕ ರಾಜ್ಯದಲ್ಲಿ ಈಗಾಗಲೇ 803 ಕೆರೆಗಳ ಹೂಳೆತ್ತಿರುವುದು ಐತಿಹಾಸಿಕ ದಾಖಲೆ. ಇಂತಹ ಕಾರ್ಯಕ್ಕೆ ಜನ ಸಹಕರಿಸಲಿ.
>
> -ಶ್ರೀ ಫಕ್ಕೀರೇಶ್ವರ ಪಟ್ಟಾಧ್ಯಕ್ಷರು.
> ಓಂಕಾರೇಶ್ವರ ಹಿರೇಮಠ, ಮಲ್ಲಸಮುದ್ರ.



ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ವೀರೇಂದ್ರ ಹೆಗ್ಗಡೆಯವರು ಮತ್ತು ಮಾತೋಶ್ರೀ ಹೇಮಾವತಿ ಅಮ್ಮನವರು ಕೆರೆ ಸಂರಕ್ಷಣೆಯ ಮೂಲಕ ರಾಜ್ಯದಲ್ಲಿ ಈಗಾಗಲೇ 803 ಕೆರೆಗಳ ಕಾಮಗಾರಿ ನೆರವೇರಿಸಿದ್ದಾರೆ. ಪೂಜ್ಯ ವೀರೇಂದ್ರ ಹೆಗ್ಗಡೆ ಅವರು ದೀಪದಂತೆ. ತಾವು ಬೆಂಕಿಯಲ್ಲಿ ಉರಿಯುತ್ತಾ ಇತರರಿಗೆ ಬೆಳಕನ್ನು ನೀಡುವ ಮನಸ್ಸು ಎಂದು ಬಣ್ಣಿಸಿದರು.

ಗದಗ ತಾ.ಪಂ ಕಾರ್ಯ ನಿರ್ವಾಹಕ ಅಧಿಕಾರಿ ಮಲ್ಲಯ್ಯ ಚನ್ನಬಸಪ್ಪ ಕೊರವಣ್ಣನವರ ಮಾತನಾಡಿ, ಕೃಷಿ ಇಲಾಖೆಯಿಂದಲೂ ರೈತರಿಗೆ ಕೃಷಿ ಹೊಂಡಗಳನ್ನು ಮಾಡಿಕೊಡಲಾಗುತ್ತದೆ. ಈ ಕೆರೆ ಕಾಮಗಾರಿ 3-4 ಗ್ರಾಮದ ರೈತರಿಗೆ ಕುಡಿಯಲು ಹಾಗೂ ಪ್ರಾಣಿ-ಪಕ್ಷಿಗಳಿಗೆ ಅನುಕೂಲವಾಗಿವೆ ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆಯ ಉಪಾಧ್ಯಕ್ಷ ಚಂದ್ರಶೇಖರ್ ಹುಣಸಿಕಟ್ಟಿ ಮಾತನಾಡಿ, ಪೂಜ್ಯ ಡಾ. ಡಿ ವೀರೇಂದ್ರ ಹೆಗ್ಗಡೆಯವರಿಗೆ ಹಾಗೂ ಮಾತೋಶ್ರೀ ಹೇಮಾವತಿ ಹೆಗ್ಗಡಿಯವರಿಗೆ ಗ್ರಾಮದ ಪರವಾಗಿ ಅಭಿನಂದನೆಗಳು ಸಲ್ಲಿಸಿ, 'ಗೋದಪ್ಪನ ಕೆರೆಯ ನೀರು ತೆರೆದಿಬ್ಬದ ಜೋಳದ ರೊಟ್ಟಿ' ಬಹು ಕಾಲದ ನೀಲವ್ವ ಹೆಣ್ಣು ಮಗಳ ಬಯಕೆಯ ಬುತ್ತಿಯಾಗಿತ್ತು ಎಂದು ಕೆರೆಯ ಇತಿಹಾಸ ತಿಳಿಸಿದರು.

ಭೂಮಿಪೂಜೆ ನೆರವೇರಿಸಿದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಗದಗ ಜಿಲ್ಲಾ ನಿರ್ದೇಶಕ ಯೋಗೇಶ ಎ. ಮಾತನಾಡಿ, ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿಯೇ ಪೂಜ್ಯ ವೀರೇಂದ್ರ ಹೆಗ್ಗಡೆಯವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯನ್ನು ಆರಂಭಿಸಿದ್ದಾರೆ. ಈ ಕೆರೆ ಅಭಿವೃದ್ಧಿ ಕಾರ್ಯಕ್ರಮ ಮಾತೋಶ್ರೀ ಹೇಮಾವತಿ ಅಮ್ಮನವರ ಕನಸಿನ ಕೂಸು ಎಂದರು.

ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಹುಯಿಲಗೋಳ ಗ್ರಾ.ಪಂ ಅಧ್ಯಕ್ಷ ಟಿಪ್ಪು ಸುಲ್ತಾನ್ ನದಾಫ್, ಪಿಡಿಒ ವಾಸುದೇವ್ ಪೂಜಾರ್, ಕ್ಷೇತ್ರ ಯೋಜನಾಧಿಕಾರಿ ಸುರೇಂದ್ರ ನಾಯಕ್ (ಖಪಿಳಆಖಳಆಕ), ಕೆರೆ ಅಭಿಯಂತರ ಸತೀಶ ಹಾಗೂ ಗ್ರಾ.ಪಂ ಸದಸ್ಯರು ಉಪಸ್ಥಿತರಿದ್ದರು.

ಕೆರೆ ಸಮಿತಿ ಅಧ್ಯಕ್ಷ ತಿಪ್ಪಣ್ಣ ಗಂಗಪ್ಪನವರ ಅಧ್ಯಕ್ಷತೆ ವಹಿಸಿದ್ದರು. ಕೆರೆ ಸಮಿತಿಯ ಸರ್ವ ಸದಸ್ಯರು, ಹುಯಿಲಗೋಳ ಗ್ರಾಮದ ನವಜೀವನ ಸಮಿತಿಯ ಸದಸ್ಯರು, ಸ್ವ-ಸಹಾಯ ಸಂಘ ಹಾಗೂ ಪ್ರಗತಿ ಬಂಧು-ಸಂಘಗಳ ಸದಸ್ಯರು, ಒಕ್ಕೂಟದ ಅಧ್ಯಕ್ಷರು ಪದಾಧಿಕಾರಿಗಳಿದ್ದರು. ಕೃಷಿ ಮೇಲ್ವಿಚಾರಕ ಕಿರಣ ಮಹೇಂದ್ರಕರ ಸ್ವಾಗತಿಸಿದರು. ವಲಯದ ಮೇಲ್ವಿಚಾರಕ ಮಲ್ಲಿಕಾರ್ಜುನ್ ಗೌಡ ನಿರೂಪಿಸಿದರು.

## ಪಂ. ಪುಟ್ಟರಾಜ ಕವಿ ಗವಾಯಿಗಳ ಜಯಂತ್ಯುತ್ಸವ

■ವಿಜಯಸಾಕ್ಷಿ ಸುದ್ದಿ, ಗದಗ

ಗಾನ ಗಂಧರ್ವ ಕಲಾ ಟ್ರಸ್ಟ್ ಗದಗ, ಡಾ. ಪಂ.ಪುಟ್ಟರಾಜ ಕವಿ ಗವಾಯಿಗಳವರ ಸಂಗೀತ ಪಾಠಶಾಲೆ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರ ದೇವಗಿರಿ ಇವರ ಸಹಯೋಗದಲ್ಲಿ ಪದ್ಮಭೂಷಣ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರ 111ನೇ ಜಯಂತ್ಯುತ್ಸವವನ್ನು ದೇವಗಿರಿಯಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಮೂಲೆಗದ್ದೆ ಸದಾನಂದ ಶಿವಯೋಗಾಶ್ರಮದ ಪೂಜ್ಯಶ್ರೀ ಅಭಿನವ ಚನ್ನಬಸವ ಮಹಾಸ್ವಾಮಿಗಳು ವಹಿಸಿದ್ದರು. ಸಾನ್ನಿಧ್ಯವನ್ನು ಕೂಡಲ ಗುರು ನಂಜೇಶ್ವರಮಠದ ಪೂಜ್ಯಶ್ರೀ ಗುರುಮಹೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿದ್ದರು. ಮುಂಡರಗಿ ಬ್ರಹನ್ಮಠ ಪೂಜ್ಯಶ್ರೀ ಡಾ. ವೀರೇಶ್ವರ ಶರಣರು ಸಮ್ಮುಖ ವಹಿಸಿದ್ದರು.

ದೇವಗಿರಿಯ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರ ಸಂಗೀತ ಪಾಠಶಾಲೆ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರದ ಅಧ್ಯಕ್ಷ ಕುಮಾರಸ್ವಾಮಿ ಗಡ್ಡದಮಠ ಉಪಸ್ಥಿತರಿದ್ದರು.



ಮಾಜಿ ಶಾಸಕ ಶಿವರಾಜ ಸಜ್ಜನ ಅಧ್ಯಕ್ಷತೆ ವಹಿಸಿದ್ದರು. ಗ್ಯಾರಂಟಿ ಯೋಜನೆಗಳ ಆಯೋಗದ ಜಿಲ್ಲಾದ್ಯಕ್ಷ ಎಸ್.ಆರ್. ಪಾಟೀಲ, ಗದುಗಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ಹಾವೇರಿ ಸಹಾಯಕ ನಿರ್ದೇಶಕ ಆರ್.ವಿ. ಚಿನ್ನಕಟ್ಟಿ, ಗದುಗಿನ ನವರತ್ನ ಜ್ಯುವೆಲರ್ಸ್ ಮಾಲೀಕ ಶಿದ್ದಲಿಂಗೇಶ ಮೂರಶಿಳ್ಳಿನ, ಹುಬ್ಬಳ್ಳಿ ಬಿವಿಬಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ. ಅನಿಲಕುಮಾರ ನಂದಿ, ಪ್ರಾಚಾರ್ಯ ಡಾ.ವೈಶಾಲಿ ಮುಂಗರವಾಡಿ ಮುಂತಾದವರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ 8 ಜೋಡಿಗಳ ಸಾಮೂಹಿಕ ವಿಹಾಹ ಜರುಗಿದವು. ಸಂಜೆ ಧರ್ಮಸಭೆ, ಶ್ರೀಗುರು ಪುಟ್ಟರಾಜ ಪುರಸ್ಕಾರ-2025 ಸಮಾರಂಭ ಜರುಗಿತು. ಕಲಾವಿದರಿಗೆ, ಗಾಯನಶ್ರೀ, ವಾದನಶ್ರೀ, ಸಾಹಿತ್ಯಶ್ರೀ ರಂಗಶ್ರೀ, ಕೀರ್ತನಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಂತರ ಪೂಜ್ಯರ ಭಾವಚಿತ್ರವನ್ನು ತೊಟ್ಟಿಲಲ್ಲಿ ಇಟ್ಟು ಜೋಗುಳ ಹಾಡಿದರು.

ಇದಕ್ಕೂ ಮುನ್ನ ಬೆಳಗ್ಗೆ 8 ಗಂಟೆಗೆ ಗುರುಗಳ ಭಾವಚಿತ್ರದೊಂದಿಗೆ ಮೆರವಣಿಗೆ ಜರುಗಿತು.

### ಜಿಲ್ಲಾ ಮಟ್ಟದ ವಿಚಾರ ಸಂಕಿರಣ, ದಲಿತ ನೌಕರರ ಸಮಾವೇಶದಲ್ಲಿ ಸಚಿವ ಎಚ್.ಕೆ. ಪಾಟೀಲ

# ಸಮರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸಿ

■ವಿಜಯಸಾಕ್ಷಿ ಸುದ್ದಿ, ಗದಗ

ಸಮಾನತೆಯುಳ್ಳ ಸಮ ಸಮಾಜ ನಿರ್ಮಾಣಕ್ಕೆ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರರ ಮೌಲ್ಯ, ತತ್ವ, ಅಧ್ಯಯನಶೀಲತೆ ಹಾಗೂ ಸಂವಿಧಾನದ ಜಾಗೃತಿ ಇಂದಿನ ಅಗತ್ಯವಾಗಿದ್ದು, ಕರ್ನಾಟಕ ದಲಿತ ನೌಕರರ ಒಕ್ಕೂಟದ ಗದಗ ಜಿಲ್ಲಾ ಶಾಖೆ ಈ ನಿಟ್ಟಿನಲ್ಲಿ ಜನಪರವಾಗಿ ಒಗ್ಗೂಡಿ ಮತ್ತಷ್ಟು ಉತ್ತಮ ಕಾರ್ಯಗಳನ್ನು ಮಾಡಬೇಕೆಂದು ಕಾನೂನು, ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ, ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಹೇಳಿದರು.

ಅವರು ಇಲ್ಲಿನ ಲಾಯನ್ಸ್ ಸಭಾಭವನದಲ್ಲಿ ಗದಗ ಜಿಲ್ಲಾ ಕರ್ನಾಟಕ ದಲಿತ ನೌಕರರ ಒಕ್ಕೂಟದ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಜಿಲ್ಲಾ ಮಟ್ಟದ ವಿಚಾರ ಸಂಕಿರಣ ಹಾಗೂ ದಲಿತ ನೌಕರರ ಸಮಾವೇಶ ಉದ್ಘಾಟಿಸಿ ಮಾತನಾಡಿ, ನೌಕರರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಒಗ್ಗಟ್ಟಾಗಿ ಹೋರಾಡುವ ರೀತಿಯೇ ರಾಷ್ಟ್ರ ಕಟ್ಟುವ ಕಾರ್ಯದಲ್ಲೂ ಸಹ ಸಮರ್ಪಿತರಾಗಿ ಕಾರ್ಯನಿರ್ವಹಿಸಬೇಕು. ಜನರಲ್ಲಿ ಸಂವಿಧಾನದ ಮೌಲ್ಯಗಳ ಕುರಿತು ಜಾಗೃತಿ ವಹಿಸಬೇಕು ಎಂದರು. ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುವ ಕ್ಷೇತ್ರದಲ್ಲೂ ಸಹ ಮೀಸಲಾತಿಯ ಅಗತ್ಯವಿದ್ದು, ಅದರ ಸಂಪೂರ್ಣ ಅನುಷ್ಠಾನ ಅವಶ್ಯ. ಈ ಹಿನ್ನೆಲೆಯಲ್ಲಿ ಸರ್ಕಾರಿ ದಲಿತ ನೌಕರರ ಒಕ್ಕೂಟ ನೊಂದವರ, ಅವಕಾಶ ವಂಚಿತರ, ದೀನ ದಲಿತರ ಆಶಾಕಿರಣವಾಗಿ ಸಮರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸಬೇಕು. ಸಮ ಸಮಾಜದ ನಿರ್ಮಾಣಕ್ಕಾಗಿ ತೊಡಗಿಸಿಕೊಳ್ಳಬೇಕೆಂದು ಹೇಳಿದರು.



ವಿಧಾನಪರಿಷತ್ ಸದಸ್ಯ ಎಸ್.ವ್ಹಿ. ಸಂಕನೂರ ಮಾತನಾಡಿ, ನೌಕರರು ಒಗ್ಗಟ್ಟಿನಿಂದ ಸಂಘಟಿತರಾದಾಗ ಮಾತ್ರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಜಿಲ್ಲಾ ದಲಿತ ನೌಕರರ ಒಕ್ಕೂಟ ಸಮಾಜಮುಖಿ ಕಾರ್ಯ ಮಾಡುವತ್ತ ಗಮನಹರಿಸಬೇಕು ಹಾಗೂ ಒಗ್ಗಟ್ಟಿನಿಂದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಂದಾಗಬೇಕೆಂದು ಹೇಳಿದರು.

ಉಪನ್ಯಾಸಕರಾಗಿ ಆಗಮಿಸಿದ ಪ್ರೊ. ಅರ್ಜುನ ಗೊಳಸಂಗಿ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರರ ಜೀವನ, ಬದುಕು ಬರಹ ಹಾಗೂ ಸಂವಿಧಾನ ಆಶಯಗಳ ಮೇಲೆ ಬೆಳಕು ಚೆಲ್ಲಿದರು. ಜಿ.ಪಂ ಮುಖ್ಯ ಲೆಕ್ಕಾಧಿಕಾರಿ ಪ್ರಶಾಂತ ಜೆ.ಸಿ ಸಂದರ್ಭೋಚಿತವಾಗಿ ಮಾತನಾಡಿದರು.

ದಲಿತ ಮುಖಂಡರಾದ ಎಸ್. ಎನ್. ಬಳ್ಳಾರಿ ಪ್ರಾಸ್ತಾವಿಕವಾಗಿ ಮಾತನಾಡುತ್ತ, ಮುಂಬರುವ ದಿನಮಾನಗಳಲ್ಲಿ ಒಗ್ಗಟ್ಟಿನಿಂದ ಮುಂದುವರೆಯುವ ಮೂಲಕ ನೌಕರರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳು ಯತ್ನಿಸಬೇಕೆಂದು ಅಭಿಪ್ರಾಯಪಟ್ಟರು.

ವೇದಿಕೆಯ ಮೇಲೆ ಡಿಡಿಪಿಐ ಆರ್.ಎಸ್. ಬುರಡಿ, ಬಿಇಓ ವಿ.ವಿ. ನಡುವಿನಮನಿ, ಬಿ.ಎಫ್. ಪೂಜಾರ, ಪ್ರೊ. ಸತೀಶ ಪಾಸಿ, ಡಿ.ಜಿ. ಜೋಗಣ್ಣವರ, ಎಂ.ಕೆ. ಲಮಾಣಿ, ಡಿ.ಎಸ್. ಮುಂದಿನಮನಿ, ದುರ್ಗಪ್ಪ ಹರಿಜನ, ನ್ಯಾಯವಾದಿ ಮೋಹನ ಭಜಂತ್ರಿ, ಪ್ರಕಾಶ ದೊಡ್ಡಮನಿ, ಅಶೋಕ ಕುಂದಗೋಳ, ತಾಲೂಕಾಧ್ಯಕ್ಷ ಎಚ್.ಆರ್. ಓಲೆಕಾರ, ಎನ್.ಎಂ. ಅರಳಿಗಿಡದ, ಶ್ರೀಕಾಂತ ನರಗುಂದ, ಆನಂದ ಮುಳಗುಂದ, ಲಕ್ಷ್ಮಣ ಗುಡಿಸಲಮನಿ, ನಾರಾಯಣಕುಮಾರ ಬಳ್ಳಾರಿ ಸೇರಿದಂತೆ ಮುಖಂಡರು ಉಪಸ್ಥಿತರಿದ್ದರು.

ದಲಿತ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಮೇಲಿನಮನಿ, ಬಿ.ಎಸ್. ತಳವಾರ ನೌಕರರ ಸಮಸ್ಯೆ, ಅದರ ಪರಿಹಾರೋಪಾಯ ಹಾಗೂ ಮುಂದೆ ಕೈಗೊಳ್ಳಬೇಕಾದ ಹೋರಾಟದ ರೂಪರೇಷೆಗಳನ್ನು ತಿಳಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಮುತ್ತು ಮಾದರ ಸ್ವಾಗತಿಸಿದರು. ಎಸ್.ಟಿ. ವಾಲ್ಮೀಕಿ ನಿರೂಪಿಸಿದರು.

## ಕೊನೆಗೂ ತೀರಿತು ಸೇಡು: ಆಸಿಸ್ ವಿರುದ್ಧ ಭರ್ಜರಿ ಜಯ; ಫೈನಲ್ ಗೆ ಟೀಮ್ ಇಂಡಿಯಾ ಎಂಟ್ರಿ!



■ವಿಜಯಸಾಕ್ಷಿ ಸುದ್ದಿ, ನವದೆಹಲಿ

ದುಬೈ ಅಂತಾರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ಮಂಗಳವಾರ ನಡೆದ ಐಸಿಸಿ ಚಾಂಪಿಯನ್ಸ್ ಟ್ರೋಫಿಯ ಸೆಮಿ ಫೈನಲ್ ಪಂದ್ಯದಲ್ಲಿ ಪ್ರಬಲ ಆಸ್ಟ್ರೇಲಿಯಾ ವಿರುದ್ಧ ಭಾರತ ತಂಡ ಭರ್ಜರಿ ಜಯ ದಾಖಲಿಸಿ ಫೈನಲ್ ಗೆ ಲಗ್ಗೆ ಇಟ್ಟಿದೆ.

ಟಾಸ್ ಗೆದ್ದ ಆಸ್ಟ್ರೇಲಿಯಾ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. 49.3 ಓವರ್ ಗಳಲ್ಲಿ 264 ರನ್ ಗಳಿಸುವಷ್ಟರಲ್ಲಿ ಆಲೌಟ್ ಆಯಿತು. ನಾಯಕ ಸ್ಟೀವ್ ಸ್ಮಿತ್ 73 ರನ್ ಗಳಿಸುವ ಮೂಲಕ ಆಸ್ಟ್ರೇಲಿಯಾಗೆ ನೆರವಾದರು. ಬಳಿಕ ಟ್ರಾವಿಸ್ ಹೆಡ್ 33 ಎಸೆತಗಳಲ್ಲಿ 39 ರನ್ ಗಳಿಸಿ ಔಟ್ ಆದರು.

ಅಲೆಕ್ಸ್ ಕೇರಿ 57 ಎಸೆತಗಳಲ್ಲಿ 61 ರನ್ ಗಳಿಸಿ ಆಸ್ಟ್ರೇಲಿಯಾ ಸವಾಲಿನ ಮೊತ್ತ ಕಲೆ ಹಾಕಲು ಕಾರಣವಾದರು. ಮಾರ್ನಸ್ ಲ್ಯಾಬುಶಾನೆ 29 ರನ್, ಡ್ವಾರಿಶಿಯಸ್ 19 ರನ್ ಗಳಿಸಿದರು. ಮೊಹಮ್ಮದ್ ಶಮಿ 3 ವಿಕೆಟ್ ಪಡೆದು ಮಿಂಚಿದರೆ, ವರುಣ್ ಚಕ್ರವರ್ತಿ ಮತ್ತು ರವೀಂದ್ರ ಜಡೇಜಾ ತಲಾ 2 ವಿಕೆಟ್ ಪಡೆದರು. ಅಕ್ಷರ್ ಪಟೇಲ್ ಮತ್ತು ಹಾರ್ದಿಕ್ ಪಾಂಡ್ಯ ತಲಾ 1 ವಿಕೆಟ್ ಪಡೆದರು.

265 ರನ್‌ಗಳ ಸವಾಲಿನ ಗುರಿ ಬೆನ್ನಟ್ಟಿದ ಭಾರತಕ್ಕೆ ಆರಂಭದಲ್ಲೇ ಆಘಾತ ಎದುರಾಯಿತು. ಶುಭಮನ್ ಗಿಲ್ 8 ರನ್ ಗಳಿಸಿ ಔಟಾದರು. ರೋಹಿತ್ ಶರ್ಮಾ 29 ಎಸೆತಗಳಲ್ಲಿ 28 ರನ್ ಗಳಿಸಿದರು. 43 ರನ್ ಗಳಿಸುವಷ್ಟರಲ್ಲಿ ಭಾರತ 2 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.

ಬಳಿಕ ಜೊತೆಯಾದ ವಿರಾಟ್ ಕೊಹ್ಲಿ ಮತ್ತು ಶ್ರೇಯಸ್ ಅಯ್ಯರ್ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದರು. ಮೂರನೇ ವಿಕೆಟ್‌ಗೆ ಈ ಜೋಡಿ 91 ರನ್‌ಗಳ ಜೊತೆಯಾಟ ಆಡಿದರು. ಶ್ರೇಯಸ್ ಅಯ್ಯರ್ 62 ಎಸೆತಗಳಲ್ಲಿ 45 ರನ್ ಗಳಿಸಿ ಔಟಾದರೆ, ವಿರಾಟ್ ಕೊಹ್ಲಿ 98 ಎಸೆತಗಳಲ್ಲಿ 84 ರನ್ ಗಳಿಸಿ ಔಟಾದರು. ಶತಕ ಗಳಿಸುವ ಅವಕಾಶವಿದ್ದರೂ ಝಂಪಾ ಬೌಲಿಂಗ್‌ನಲ್ಲಿ ಬೌಂಡರಿ ಗಳಿಸಲು ಹೋಗಿ ಕ್ಯಾಚ್ ನೀಡಿ ಔಟಾಗಿದ್ದು ನಿರಾಸೆ ಮೂಡಿಸಿತು.

ಅಕ್ಷರ್ ಪಟೇಲ್ 30 ಎಸೆತಗಳಲ್ಲಿ 27 ರನ್ ಗಳಿಸಿದರೆ, ಹಾರ್ದಿಕ್ ಪಾಂಡ್ಯ 24 ಎಸೆತಗಳಲ್ಲಿ ಮೂರು ಭರ್ಜರಿ ಸಿಕ್ಸರ್ ಸಹಿತ 28 ರನ್ ಗಳಿಸಿದರು. ಕೆಎಲ್ ರಾಹುಲ್ 34 ಎಸೆತಗಳಲ್ಲಿ ಅಜೇಯ 42 ರನ್ ಗಳಿಸಿದರು. ರವೀಂದ್ರ ಜಡೇಜಾ 2 ರನ್ ಗಳಿಸಿದರು.

ಮಾರ್ಚ್ 9ರಂದು ದುಬೈನಲ್ಲಿ ಫೈನಲ್ ಪಂದ್ಯ ನಡೆಯಲಿದೆ.

### ಶಂಕರಲಿಂಗ ಗಡ್ಡಿ ಬಸವೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಲೇಖನ

## ಗಡ್ಡಿ ಬಸವೇಶ್ವರನ ಕೃಪೆಗೆ ಪಾತ್ರರಾಗೋಣ ಬನ್ನಿ

ಗದಗ ಜಿಲ್ಲೆ ಶಿರಹಟ್ಟಿ ತಾಲೂಕಿನ ಸಾಸರವಾಡ ಗ್ರಾಮವು ಗದಗ ಜಿಲ್ಲೆಯಿಂದ ಸುಮಾರು 70–75 ಕಿಮೀ ದೂರದಲ್ಲಿದ್ದು, ರಮ್ಯವಾದ ಅರಣ್ಯ ಸಂಪತ್ತಿನಿಂದ ಕಂಗೊಳಿಸುತ್ತಿದೆ. ಇದು ಹೊಲ–ಗದ್ದೆಗಳು ರಕ್ಷಣೆಗಾಗಿ ಮುಳ್ಳಿನ ಬೇಲಿಗಳನ್ನು ಹೊಂದಿದಂತೆ ತನ್ನ ರಕ್ಷಣೆಗೆ ನಿಸರ್ಗದತ್ತವಾಗಿ ಸುತ್ತಲೂ ವಿಸ್ತಾರವಾದ ತುಂಗಭದ್ರೆಯನ್ನು ಹೊಂದಿ ನಡುಗಡ್ಡೆ ಪ್ರದೇಶವಾಗಿದೆ. ಇಲ್ಲಿ ಅನೇಕ ಋಷಿ–ಮುನಿಗಳು ತಪಗೈದ ನಂಬಿಕೆ ಇಲ್ಲಿನ ಭಕ್ತಾದಿಗಳಿಗಿದೆ.




ಸಾಸರವಾಡ ಗ್ರಾಮದಲ್ಲಿನ ಕಲ್ಮೇಶ್ವರ ದೇವಾಲಯದ ಎದುರಿಗಿರುವ ಒಂದು ದಾನಶಾಸನವನ್ನು ಅಧ್ಯಯನ ಮಾಡಿದ ಎಂ.ಎಂ. ಕಲಬುರಗಿ ಅವರ ಪ್ರಕಾರ ಕಲ್ಮೇಶ್ವರ ದೇವಾಲಯದ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದದ್ದು ಎಂದು ತಿಳಿದುಬರುತ್ತದೆ. ಇದರ ಪ್ರಕಾರ ಸಾಸರವಾಡ ಗ್ರಾಮದಲ್ಲಿ ಮಸಣಯ್ಯ ನಾಯಕ ಎಂಬ ವ್ಯಕ್ತಿ ಇಂದ್ರಕೇಶಿ ಎಂಬ ರಾಜನ ಆಜ್ಞೆಯ ಮೇರೆಗೆ ಉತ್ತರೇಶ್ವರ ದೇವಾಲಯ ನಿರ್ಮಾಣ ಮಾಡಿ ಕಲ್ಯಾಣಿ ಚಾಲುಕ್ಯರ ಒಂದನೇ ಸೋಮೇಶ್ವರನಿಗೆ ದಾನ ನೀಡಿದನೆಂದು ಈ ಶಾಸನ ತಿಳಿಸಿದ್ದು, ಗ್ರಾಮದ ಹೆಸರು ಮೊದಲಿಗೆ ಸಾಸಿರರಾವೆ ಎಂಬುದಾಗಿದ್ದು, ಕಾಲಕ್ರಮೇಣ ಸಾಸರವಾಡವಾಗಿದೆ ಎಂದು ತಿಳಿದುಬರುತ್ತದೆ. ಇದರೊಂದಿಗೆ ಮತ್ತೊಂದು ಶಾಸನವಿದ್ದು, ಅದು ಅಧ್ಯಯನಕ್ಕೆ ಒಳಪಟ್ಟಿದೆಯೋ ಇಲ್ಲವೋ ತಿಳಿದಿಲ್ಲ.

ಈ ನಡುಗಡ್ಡೆ ಪ್ರದೇಶದಲ್ಲಿ ಬಿದಿರು, ಆಲದ ಮರ, ಹುಣಸೆ ಮರ, ಹತ್ತಿ ಮರ, ನೇರಳೆ ಮರ ಹಿಗೇ ಹತ್ತು ಹಲವಾರು ಬಗೆಯ 150–200 ವರ್ಷಗಳಿಗೂ ಹಳೆಯದಾದ ಮರಗಳನ್ನು ಒಳಗೊಂಡಿದೆ. ಇಲ್ಲಿ ಟಿಟಿಟ್ರಾಂ, ಗೊರವಂಕ, ಬೆಳ್ಳಕ್ಕಿ, ನೀರುಬಕ, ಕಪ್ಪುತಲೆ, ಕಂಬರಕ, ಬೂದುಬಕ, ಕೊಳದಬಕ, ಕೆನ್ನೀಲಿಬಕ, ಇರುಳಬಕ, ಬಾವಲಿಗಳು, ನೀರುನಾಯಿ, ಮೊಸಳೆಗಳು ಹೀಗೆ ಅನೇಕಾನೇಕ ಜೀವಸಂಕುಲಗಳು ಸ್ವಚ್ಛಂದವಾಗಿ ವಿಹರಿಸುವುದನ್ನು ನಾವು ಕಾಣಬಹುದು.

ಈ ನಡುಗಡ್ಡೆ ಪ್ರದೇಶದಲ್ಲಿ ಬಸವೇಶ್ವರ ಹಾಗೂ ವೀರಭದ್ರೇಶ್ವರ ದೇವಾಲಯ ಇದ್ದು, ಇವೆರಡೂ ದೇವರ ಜಾತ್ರೆ ವರ್ಷಕ್ಕೊಮ್ಮೆ ಒಟ್ಟಿಗೆ ನಡೆಯುತ್ತದೆ. ಈ ನಡುಗಡ್ಡೆಗೆ ಹೋಗಬೇಕಾದರೆ ಮೊದಲಿಗೆ ನದಿಯಲ್ಲಿ ನಡೆದುಕೊಂಡೇ ಹೋಗಬೇಕಾಗಿತ್ತು. ಆದರೆ ಕಳೆದ ವರ್ಷಗಳಿಂದ ಸೇತುವೆ ನಿರ್ಮಾಣವಾಗಿದ್ದು, ಸದಾಕಾಲ ಯಾವಾಗಲೂ ಸಂಚರಿಸಲು ಅನುಕೂಲವಾಗಿದೆ.

ಇಲ್ಲಿಗೆ ಸಾಗರೋಪಾದಿಯಲ್ಲಿ ಭಕ್ತ ಸಂಕುಲ ಹರಿದು ಬಂದು ವಿಶಾಲ ತುಂಗಭದ್ರೆಯಲಿ ಮಿಂದು ಆ ಗ್ರಾಮಾದಿದೈವ ಶಂಕರಲಿಂಗ ಗಡ್ಡಿ ಬಸವೇಶ್ವರನ ಕೃಪೆಗೆ ಪಾತ್ರರಾಗುತ್ತಾರೆ.

ಅದೇ ರೀತಿ ಈ ವರ್ಷ ಮಾರ್ಚ್ 7ರಂದು ಪುಷ್ಪ ರಥೆ ೋತ್ಸವ, ಮಾ. 8 ರಂದು ದೊಡ್ಡ ರಥೋತ್ಸವ, ಮಾ.9ರಂದು ಅಗ್ನಿ ಕುಂಡ ಮಹೋತ್ಸವಗಳು ನೆರವೇರಲಿವೆ.



**– ಜಿ.ಎನ್. ಪಾಟೀಲ, ಸಾಸರವಾಡ.**

## ಯಥಾಸ್ಥಿತಿಯಲ್ಲಿ ಬಸ್ ನಿಲುಗಡೆಗೆ ಆಗ್ರಹ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶಿಗ್ಲಿ ಗ್ರಾಮದ ಹಳೆ ಬಸ್ ನಿಲ್ದಾಣದಲ್ಲಿ ಸಂಚರಿಸುವ ಎಲ್ಲ ಬಸ್ಸುಗಳನ್ನು ನಿಲುಗಡೆ ಮಾಡಬೇಕು ಎಂದು ಗ್ರಾ.ಪಂ ಸದಸ್ಯರು ಹಾಗೂ ವ್ಯಾಪಾರಸ್ಥರು ಅಗ್ರಹಿಸಿದರು.

ಗ್ರಾ.ಪಂ ಸದಸ್ಯ ಸಂತೋಷ ತಾಂದಳೆ ಮಾತನಾಡಿ, ಅನೇಕ ವರ್ಷಗಳಿಂದಲೂ ಎಲ್ಲರಿಗೂ ಅನಕೂಲವಾಗುವ ಹಳೇ ಬಸ್ ನಿಲ್ದಾಣದಲ್ಲಿಯೇ ಬಸ್ಸುಗಳನ್ನು ನಿಲುಗಡೆ ಮಾಡುತ್ತಾ ಬರಲಾಗಿದೆ. ಗ್ರಾಮದ ಕೇಂದ್ರ ಸ್ಥಳವಾಗಿದ್ದರಿಂದ ವ್ಯಾಪಾರಸ್ಥರು, ವಿದ್ಯಾರ್ಥಿಗಳು, ರೋಗಿಗಳು, ಹಿರಿಯ ನಾಗರಿಕರು, ವೃದ್ಧರು, ಮಹಿಳೆಯರು ಸೇರಿ ಎಲ್ಲ ವರ್ಗದ ಜನರಿಗೂ ಅನಕೂಲವಾಗಿದೆ. ಆದರೆ ಏಕಾಏಕಿ ಕೆಲ ದಿನಗಳಿಂದ ಹಳೇ ಬಸ್ ನಿಲ್ದಾಣವಿದ್ದ ಸ್ಥಳದಲ್ಲಿ ಬಸ್ ನಿಲುಗಡೆ ಸಂಪೂರ್ಣ ಬಂದ್ ಮಾಡಿದ್ದರಿಂದ ಜನರಿಗೆ ಸಾಕಷ್ಟು ತೊಂದರೆಯಾಗಿದೆ.

ಹೊಸ ಬಸ್ ನಿಲ್ದಾಣದೊಳಗೆ ಎಲ್ಲ ಬಸ್ಸುಗಳು ಹೋಗಿ–ಬರಲು ಯಾರದ್ದೂ ತಕರಾರಿಲ್ಲ. ಮೊದಲಿನಂತೆ ಹಳೇ ಬಸ್ ನಿಲ್ದಾಣದಲ್ಲಿ ಜನರ ಕೋರಿಕೆಯಂತೆ ನಿಲುಗಡೆ ಮಾಡಲೇಬೇಕು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಲಾಗಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ಈ ಬಗ್ಗೆ ಅಧಿಕಾರಿಗಳು ಜನರ ಮನವಿಗೆ ಸ್ಪಂದಿಸಬೇಕು ಎಂದರು.

ಈ ವೇಳೆ ಬಸವರಾಜ ಕೂಸನೂರ, ಸಿದ್ದರಾಮಸ್ವಾಮಿ ಪೂಜಾರ, ಶಶಿಧರ ವ್ಂುಳ್ಂುಗ್ಂುಂದ್ವ್ಂುಠ್, ಮಂಜುನಾಥ ಕಡೆಮನಿ, ವಿನಾಯಕ ಹೆಬ್ಬಳ್ಳಿ, ಆನಂದ ಮಾಳಗಿ, ಸಂತೋಷ ಜನಿವಾರದ, ಯಲ್ಲಪ್ಪ ಲಕ್ಷ್ಮೇಶ್ವರ, ಬಸವರಾಜ ಗುಂಡಮಿ, ಲಕ್ಷ್ಮಣ ಕುರಿ, ಶಿವಪುತ್ರಪ್ಪ ಅಳ್ಳಳ್ಳಿ ಸೇರಿ ಅನೇಕರಿದ್ದರು.

## ಸುಮಾರು 8 ಸಾವಿರ ಸರ್ಕಾರಿ ಶಾಲೆಗಳಲ್ಲಿ ಒರ್ವ ಶಿಕ್ಷಕರಿಂದ ಮಾತ್ರ ಪಾಠ: ಜಾರ್ಖಂಡ್ ಶಿಕ್ಷಣ ಸಚಿವ



■ವಿಜಯಸಾಕ್ಷಿ ಸುದ್ದಿ, ಜಾರ್ಖಂಡ್

ಜಾರ್ಖಂಡ್‌ನಲ್ಲಿ ಸುಮಾರು 7,930 ಸರ್ಕಾರಿ ಶಾಲೆಗಳು ತಲಾ ಒಬ್ಬ ಶಿಕ್ಷಕರೊಂದಿಗೆ ಕಾರ್ಯನಿರ್ವಹಿಸುತ್ತಿವೆ ಎಂದು ಶಿಕ್ಷಣ ಸಚಿವ ರಾಮದಾಸ್ ಸೊರೇನ್ ಮಂಗಳವಾರ ತಿಳಿಸಿದ್ದಾರೆ.

ಶಿಕ್ಷಕರ ಬಿಕ್ಕಟ್ಟಿನ ಕುರಿತು ವಿಧಾನಸಭೆಯಲ್ಲಿ ಬಿಜೆಪಿ ಶಾಸಕ ರಾಜ್ ಸಿನ್ಹಾ ಅವರ ಪ್ರಶ್ನೆಗೆ ನೀಡಿದ ಲಿಖಿತ ಉತ್ತರದಲ್ಲಿ, ಈ ಏಕ ಶಿಕ್ಷಕರ ಶಾಲೆಗಳಲ್ಲಿ 3.81 ಲಕ್ಷ ವಿದ್ಯಾರ್ಥಿಗಳು ದಾಖಲಾಗಿದ್ದಾರೆ ಎಂದು ಅವರು ಹೇಳಿದರು.

ಈ ಬಗ್ಗೆ ಸದನದಲ್ಲಿ ಮಾತನಾಡಿದ ಸೋರೆನ್, 103 ಶಾಲೆಗಳು ಯಾವುದೇ ವಿದ್ಯಾರ್ಥಿಗಳಿಲ್ಲದೆ ಕಾರ್ಯನಿರ್ವಹಿಸುತ್ತಿವೆ; 17 ಶಿಕ್ಷಕರು ಅವುಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

### ಸೂರಣಗಿ ಕ್ಲಸ್ಟರ್ ಮಟ್ಟದ ಎಫ್‌ಎಲ್‌ಎನ್ ಕಲಿಕಾ ಹಬ್ಬದಲ್ಲಿ ಬಿಇಓ ಎಚ್.ಎನ್. ನಾಯ್ಕ್

## ಗ್ರಾಮೀಣ ಮಕ್ಕಳಲ್ಲಿ ಅದ್ಭುತ ಪ್ರತಿಭೆಯಿದೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಬಾಲೆಹೊಸೂರು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಕನ್ನಡ ಹೆಣ್ಣುಮಕ್ಕಳ ಶಾಲೆಯಲ್ಲಿ ಸೋಮವಾರ ಸೂರಣಗಿ ಕ್ಲಸ್ಟರ್ ಮಟ್ಟದ ಎಫ್‌ಎಲ್‌ಎನ್ ಕಲಿಕಾ ಹಬ್ಬವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ನಾಣಕೀ ನಾಯ್ಕ್ ಉದ್ಘಾಟಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿನ ಮಕ್ಕಳಲ್ಲಿ ಅದ್ಭುತ ಪ್ರತಿಭೆ ಅಡಗಿರುತ್ತದೆ. ಅವುಗಳಿಗೆ ಸರಿಯಾಗಿ ಪ್ರೋತ್ಸಾಹ ನೀಡುವ ಕಾರ್ಯವನ್ನು ಮಾಡುವದು ಅವಶ್ಯವಾಗಿದೆ. ಬಾಲೆಹೊಸೂರು ಗ್ರಾಮದ ಎಲ್ಲ ಸರಕಾರಿ ಶಾಲೆಗಳಲ್ಲಿ ಸಮುದಾಯದ ಸಹಭಾಗಿತ್ವದಿಂದಾಗಿ ಮಕ್ಕಳ ಕಲಿಕೆಗೆ ಹಾಗೂ ಶೈಕ್ಷಣಿಕ ವಾತಾವರಣಕ್ಕೆ ಪೂರಕವಾದಂತಹ ವಾತಾವರಣವಿದ್ದು, ಗ್ರಾಮೀಣ ಪ್ರದೇಶದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸಹಾಯಕಾರಿಯಾಗಿದೆ. ಶಾಲೆಗಳ ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಸ್ಥಳೀಯ ಆಡಳಿತ ಸಂಸ್ಥೆಗಳು ಸಮನ್ವಯ ಸಾಧಿಸಿ ಕಲಿಕೆಯನ್ನು ಪ್ರೋತ್ಸಾಹಿಸುವ ಕಾರ್ಯ ಇಲ್ಲಿ ನಡೆಯುತ್ತಿದ್ದು, ಇದು ಇತರ ಗ್ರಾಮಗಳಿಗೂ ಮಾದರಿಯಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಎಸ್‌ಡಿಎಮ್‌ಸಿ ಅಧ್ಯಕ್ಷ ಹಾಲೇಶ್ ಜಾಲವಾಡಗಿ ವಹಿಸಿದ್ದರು. ಪರಶುರಾಮ್ ಮೈಲಾರಿ, ಸಿದ್ದಪ್ಪ ನೆನಗನಹಳ್ಳಿ, ಗ್ರಾ.ಪಂ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು, ಗ್ರಾಮದ ಶಿಕ್ಷಣ ಪ್ರೇಮಿಗಳು, ಎಸ್‌ಡಿಎಮ್‌ಸಿ ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಎಂ.ಎ. ನದಾಫ್, ಬಿಆರ್‌ಪಿ ಬಿ.ಎಂ. ಯರಗುಪ್ಪಿ ಸಿಆರ್‌ಪಿಗಳಾದ ಆರ್.ಮಹಾಂತೇಶ್, ಜ್ಯೋತಿ ಗಾಯಕ್ವಾಡ್, ಎಲ್. ಎಫ್. ಮಠದ ಹಾಜರಿದ್ದರು.

ವಿವಿಧ ಶಾಲೆಗಳಿಂದ ಆಗಮಿಸಿದ ಪ್ರಧಾನ ಗುರುಗಳು, ಸಹ ಶಿಕ್ಷಕರು, ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳು, ನಿರ್ಣಾಯಕರು ಪಾಲ್ಗೊಂಡಿದ್ದರು. ಮುಖ್ಯೋಪಾಧ್ಯಾಯರಾದ ಸಿದ್ದಪ್ಪ ಸಜ್ಜಗಾರ ಸ್ವಾಗತಿಸಿದರು, ಶೋಭಾ ನಡುವಿನಮನಿ ನಿರೂಪಿಸಿದರು, ಗಿರೀಶ್ ಕುಬಸದ ವಂದಿಸಿದರು.

## ಪಂ. ಎಂ. ವೆಂಕಟೇಶಕುಮಾರರಿಗೆ 'ಗುರುಕುಮಾರ ಪಂಚಾಕ್ಷರಿ ಸಮ್ಮಾನ–2025' ಪುರಸ್ಕಾರ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಶ್ರೀ ಅಡವೀಂದ್ರಸ್ವಾಮಿ ಮಠದ ಕೃಪಾಶ್ರಯದಲ್ಲಿ ಮಾರ್ಚ್ 4 ಮತ್ತು 5ರಂದು ನಡೆಯುವ ಗಾನಯೋಗಿ ಸಂಗೀತ ಪರಂಪರಾ ಉತ್ಸವ, ಪಂಚಾಕ್ಷರಿ ಗದಗ ಘರಾನಾ ಸಮ್ಮೇಳನದಲ್ಲಿ ಶ್ರೀ ಗುರು ಪಂಚಾಕ್ಷರಿ ಸೇವಾ ಸಮಿತಿ ಗದಗ ವತಿಯಿಂದ ಕೊಡ ಮಾಡುವ 'ಗುರುಕುಮಾರ ಪಂಚಾಕ್ಷರಿ ಸಮ್ಮಾನ–2025' ಪ್ರಶಸ್ತಿಗೆ ಅಂತಾರರಾಷ್ಟ್ರೀಯ ಶಾಸ್ತ್ರೀಯ ಸಂಗೀತಗಾರ, ಸ್ವರ ಸಾಮ್ರಾಟ ಪದ್ಮಶ್ರೀ ಡಾ. ಪಂ. ಎಂ ವೆಂಕಟೇಶಕುಮಾರ ಭಾಜನರಾಗಿದ್ದಾರೆ.



ಪಂ. ವೆಂಕಟೇಶಕುಮಾರರು ಧಾರವಾಡ ವಿಶ್ವವಿದ್ಯಾಲಯದ ಸಂಗೀತ ಮಹಾವಿದ್ಯಾಲಯದಲ್ಲಿ 33 ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಭಾರತಿಯ ಸಂಗೀತ ಕ್ಷೇತ್ರದಲ್ಲಿ ಅತ್ಯುನತ 'ಎ ಟಾಪ್' ಗ್ರೇಡ್ ಹೊಂದಿದ ಶ್ರೇಷ್ಠ ಸಂಗೀತ ಕಲಾವಿದರಾಗಿದ್ದಾರೆ. ಶ್ರೀ ಸತ್ಯಸಾಯಿ ವಿಶ್ವವಿದ್ಯಾಲಯ ಮದ್ದೇನಹಳ್ಳಿಯಿಂದ ಗೌರವ ಡಾಕ್ಟರೇಟ್, ಕಾಳಿದಾಸ ಸಮ್ಮಾನ್ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಸ್ವರ ಲಯ ಸಾಮ್ರಾಟ್, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿಯಿಂದ ಪ್ರಶಸ್ತಿ, ವತ್ಸಲಾ ಭೀಮಸೇನ್ ಜೋಶಿ ಪ್ರಶಸ್ತಿ, ಹೀಗೆ ರಾಜ್ಯ, ಹೊರರಾಜ್ಯ ಹಾಗೂ ಭಾರತ ಸರಕಾರದಿಂದ ಲೆಕ್ಕವಿಲ್ಲದಷ್ಟು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ಇಂತಹ ಮಹಾನ್ ಸಾಧಕರಿಗೆ ಇದೇ ಮಾ. 5ರಂದು ಗದುಗಿನ ಶ್ರೀ ಅಡವೀಂದ್ರಸ್ವಾಮಿಮಠದಲ್ಲಿ ಶ್ರೀ ಗುರು ಪಂಚಾಕ್ಷರಿ ಸೇವಾ ಸಮಿತಿ ಗದಗ ವತಿಯಿಂದ ಆಚರಿಸುವ ಕಾರ್ಯಕ್ರಮದಲ್ಲಿ 'ಗುರುಕುಮಾರ ಪಂಚಾಕ್ಷರಿ ಸಮ್ಮಾನ–2025' ನೀಡಿ ಗೌರವಿಸಲಾಗುವುದು ಎಂದು ಶ್ರೀ ಗುರು ಪಂಚಾಕ್ಷರಿ ಸೇವಾ ಸಮಿತಿ ಕಾರ್ಯದರ್ಶಿ ಮಲ್ಲಯ್ಯ ಶಿರೋಳಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗದಗ ತಾಲೂಕಿನ ನರಸಾಪೂರ ಗ್ರಾಮದ ನಾಲತವಾಡ ವೀರೇಶ್ವರ ಶರಣರ ಮಠದಲ್ಲಿ ವೀರೇಶ್ವರ ಶರಣರ ಜಯಂತ್ಯುತ್ಸವ, ಚಂದ್ರಶೇಖರ ಶರಣರ ಪುಣ್ಯಸ್ಮರಣೋತ್ಸವದ ಅಂಗವಾಗಿ ಮಂಗಳವಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದ ರಥೋತ್ಸವ ಜರುಗಿತು. ಶ್ರೀಮಠದ ಶಿವಕುಮಾರ ಶರಣರು ನೇತೃತ್ವ ವಹಿಸಿದ್ದರು. ರಥೋತ್ಸವಕ್ಕೂ ಮುನ್ನ ಷಟಸ್ಥಲ ಧ್ವಜಾರೋಹಣ, ವೀರೇಶ್ವರ ಶರಣರ ಹಾಗೂ ಚಂದ್ರಶೇಖರ ಶರಣರ ಮೂರ್ತಿಗಳಿಗೆ ಮಹಾರುದ್ರಾಭಿಷೇಕ ನಂತರ ಚಂದ್ರಶೇಖರ ಶರಣರ ಪುಣ್ಯಸ್ಮರಣೋತ್ಸವ ಕಾರ್ಯಕ್ರಮ ಜರುಗಿತು.

### ತೋಂಟದಾರ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ 'ರೋಬೋಟಿಕ್ಸನ ಮೂಲಭೂತ ಅಂಶಗಳು' ಕುರಿತು ಕಾರ್ಯಾಗಾರ

## ರೋಬೋಟಿಕ್ಸ್ ತಾಂತ್ರಿಕ ಪ್ರಗತಿಯ ನಿರ್ಣಾಯಕ ಕ್ಷೇತ್ರ

■ವಿಜಯಸಾಕ್ಷಿ ಸುದ್ದಿ, ಗದಗ

ತಂತ್ರಜ್ಞಾನ ಮುಂದುವರೆದಂತೆ, ಅನೇಕ ಉದ್ಯೋಗಗಳು ಯಾಂತ್ರೀಕೃತಗೊಂಡು ಹೊಸ ತಂತ್ರಜ್ಞಾನ ೦ಖ ಅನ್ನು ಅಳವಡಿಸಿಕೊಂಡು, ಹೆಚ್ಚು ಕಾರ್ಯಪ್ರವೃತ್ತವಾಗಿವೆ. ರೋಬೋಟಿಕ್ಸ್ ಕಲಿಯುವುದರಿಂದ ಭವಿಷ್ಯದ ಉದ್ಯೋಗ ಮಾರುಕಟ್ಟೆಗೆ ನಿಮ್ಮನ್ನು ಸಿದ್ಧಪಡಿಸುತ್ತದೆ ಮತ್ತು ತಂತ್ರಜ್ಞಾನ–ಚಾಲಿತ ಜಗತ್ತಿನಲ್ಲಿ ನಿಮಗೆ ಒಂದು ಅಂಚನ್ನು ನೀಡುತ್ತದೆ ಎಂದು ಉಪ ಪ್ರಾಂಶುಪಾಲ ಡಾ. ಗೌತಮ್ ರೇವಣಕರ್ ಅಭಿಪ್ರಾಯಪಟ್ಟರು.



ಇಲ್ಲಿನ ತೋಂಟದಾರ್ಯ ತಾಂತ್ರಿಕ ಮಹಾವಿದ್ಯಾಲಯದ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದಿಂದ 'ರೋಬೋಟಿಕ್ಸ್ ಮೂಲಭೂತ ಅಂಶಗಳು' ವಿಷಯದ ಕುರಿತು ಹಮ್ಮಿಕೊಂಡಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂಚಾಲಕರು ಮತ್ತು ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡಿದ್ದ ಡಾ. ಶೈಲಜಾ ಮುದೇನಗುಡಿ ರೊಬೊಟಿಕ್ಸ್ ಯಂತ್ರ ಮತ್ತು ೦ಖ–ಚಾಲಿತ ಕೈಗಾರಿಕೆಗಳ ಮೂಲವಾಗಿದೆ. ಜಾಗತಿಕವಾಗಿ ಬೆಳೆಯುತ್ತಿರುವ ವ್ಯವಹಾರಗಳು ಮತ್ತು ಸಮಾಜವು ಹೆಚ್ಚು ಹೆಚ್ಚು ಸ್ಮಾರ್ಟ್ ತಂತ್ರಜ್ಞಾನವನ್ನು ಅವಲಂಬಿಸುತ್ತಿರುವುದರಿಂದ, ರೋಬೋಟ್‌ಗಳ ಬಳಕೆ ಹೆಚ್ಚುತ್ತಲಿದೆ. ಅವು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಅರ್ಥಮಾಡಿಸುವ ದಿಸೆಯಲ್ಲಿ ವಿದ್ಯಾರ್ಥಿಗಳಿಗೆ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಇದು ಇಂದಿನ ತಾಂತ್ರಿಕ ಪ್ರಗತಿಯ ಅತ್ಯಂತ ನಿರ್ಣಾಯಕ ಕ್ಷೇತ್ರಗಳಲ್ಲಿ ಒಂದಾಗಿದೆ ಎಂದು ಹೇಳಿದರು.

ಪ್ರೊ. ಜಗದೀಶ್ವರ್ ಎಸ್, ಪ್ರೊ. ಆದೇಶ ಅಂಗಡಿ ವಿದ್ಯಾರ್ಥಿಗಳಿಗೆ ಕ್ಷೇತ್ರದ ಸಮಗ್ರ ಮಾಹಿತಿ ಒದಗಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಪ್ರೊ. ಮುಕ್ತಾ ಪಾಟೀಲ ಮಾತನಾಡಿ, ರೊಬೊಟಿಕ್ಸ್ ಕಲಿಯುವುದರಿಂದ ರೊಬೊಟಿಕ್ಸ್ ಇಂಜಿನಿಯರಿಂಗ್, ೦ಖ ಅಭಿವೃದ್ಧಿ, ಯಾಂತ್ರೀಕೃತಗೊಂಡ ಮತ್ತು ಮೆಕಾಟ್ರಾನಿಕ್ಸ್‌ನಲ್ಲಿ ವೃತ್ತಿ ಅವಕಾಶಗಳು ತೆರೆದುಕೊಳ್ಳಬಹುದು. ಕೈಗಾರಿಕೆಗಳು ರೊಬೊಟಿಕ್ಸ್‌ನ್ನು ಅಳವಡಿಸಿಕೊಳ್ಳುವುದನ್ನು ಮುಂದುವರೆಸಿದಂತೆ, ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ವೃತ್ತಿಪರರು ನಾವೀನ್ಯತೆ ಮತ್ತು ತಾಂತ್ರಿಕ ಪ್ರಗತಿಯನ್ನು ಹೆಚ್ಚಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾರೆ ಎಂದು ಅಭಿಪ್ರಾಯಪಟ್ಟರು.

ಎಲ್ಲ ವಿಭಾಗದ ಮುಖ್ಯಸ್ಥರು, ಸಿಬ್ಬಂದಿಗಳು ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಮುಖ್ಯಸ್ಥರಾದ ಡಾ. ಶೇರ್ವಾಣಿ ಉಪಸ್ಥಿತರಿದ್ದರು. ಡಾ. ಅಶ್ವಿನಿ ಅರಳಿ ಸ್ವಾಗತ ಕೋರಿದರು. ಪ್ರೊ. ನೀತಾ ಮುದರಡ್ಡಿ ವಂದಿಸಿದರು.

## ಗದಗ-ಬೆಟಗೇರಿ: ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಮಾರ್ಚ್ 5ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳಗಳ ವಿವರ: ವಾರ್ಡ್ ನಂ. 4ರಲ್ಲಿ ಹುಯಿಲಗೋಳ ರಸ್ತೆ ಬಲಭಾಗ, ಪೂರ್ತಿ, ಟರ್ನಲ್ ಪೇಟೆ, ಮಾಜಿ ಮೆಂಬರ್ ಲೈನ್, ಗೌರಿಗುಡಿ, ಬ್ಯಾಳಿಯವರ ಲೈನ್, ಬಿಂಕದಕಟ್ಟಿ ಅವರ ಲೈನ್, ಮಂಜುನಾಥ ನಗರ, ಬಿ.ಎಸ್.ಎನ್.ಎಲ್. ಆಫೀಸ್ 200 ಮನೆ, 270 ಮನೆ, ಕಣವಿ ಪ್ಲಾಟ್ ವಿವಿಧ ಉಳಿದ ಭಾಗಗಳು

ವಾರ್ಡ್ ನಂ. 26 – ಬೂಸ್ತರ ನಂದಿ, ಕಬಾಡಿ ರಸ್ತೆ, ಬೇವಿನಕಟ್ಟಿ ಲೈನ್, ಉರ್ದು ಶಾಲೆ ಲಕ್ಷ್ಮಿ ಚಾಳ, ಸಂಗಮ್ ಬಜಾರ, ಜನತಾ ಕಿರಾಣಿ, ದನದ ದವಾಖಾನೆ, ಹಳೇ ಬಸ್ ಸ್ಟ್ಯಾಂಡ್ ಉಳಿದ ಭಾಗಗಳು. ವಾರ್ಡ್ ನಂ. 12, 13, 28 – ಕಾರ್ಕಳ ಗಣಪತಿ ಗುಡಿ, ಅಗಸರ, ಟೋಪಿಯವರ ಲೈನ್, ಜಾಧವ್, ಮಾಲಿ ಪಾಟೀಲ, ಮುಧೋಳ, ಗೋಡಬೋಲೆ ಡಾ॥ ಜೆ.ಟಿ.ಕಾಲೇಜ್ ರಸ್ತೆ, ಅಂಗಡಿಯವರ, ಅರಸಿದ್ದಿ ಅವರ ಲೈನ್, ಶಿವನಗುತ್ತಿಯವರ ಲೈನ್, ಉಳಿದ ಭಾಗಗಳು

ವಾರ್ಡ್ ನಂ. 28ರ ನಂದೀಶ್ವರ ಮಠದ ಲೈನ್, ಕುಲಕರ್ಣಿಯವರ ಲೈನ್, ಸಂತೋಷ ಕಿರಾಣಿ, ದೇವಗಿರಿಯವರ ಅಂಗಡಿ, ಅನ್ನಪೂರ್ಣ ಅಪಾರ್ಟ್ಮೆಂಟ್, ಕೊರ್ಲಹಳ್ಳಿ ಮಾಸ್ತರ್, ಅಬ್ಬಿಗೇರಿ, ಗವಾಯಿಗಳ ಆಶ್ರಮ, ಸೋಲಾಪಟ್ಟಿ, ಕೃಷ್ಣ ಟ್ಯೂಷನ್ ಲೈನ್, ಉಳಿದ ಭಾಗಗಳು, ವಾರ್ಡ್ ನಂ. 22 –ಪಾಮಡೇವರ ಲೈನ್, ಅಕ್ಕಿಯವರ ಲೈನ್, ನಿಂಗಪ್ಪನ ಲೈನ್, ಸ್ವಾಮಿಯವರ ಲೈನ್, ಸಫಾರಿಯವರ ಲೈನ್, ಉಳಿದ ಕೆಲವು ಭಾಗಗಳು.

ತುಂಗಭದ್ರಾ ನದಿಯಿಂದ ಸರಬರಾಜು ಆಗುತ್ತಿರುವ ನೀರನ್ನು ಕಾಯಿಸಿ ಆರಿಸಿ ಕುಡಿಯಲು ನಿರ್ದೇಶನ ನೀಡಲಾಗಿದೆ ಹಾಗೂ ತಮಗೆ ನೀರು ಸಾಕಾದಾಗ ತಮ್ಮ ತಮ್ಮ ನೀರಿನ ನಳಗಳನ್ನು ಬಂದ್ ಮಾಡುವ ಮೂಲಕ ನೀರು ಪೋಲಾಗದಂತೆ ತಡೆಯುವಲ್ಲಿ ಮುತುವರ್ಜಿ ವಹಿಸಬೇಕೆಂದು ಹಾಗೂ ತಮ್ಮ ನೀರಿನ ಕರ ಪಾವತಿಸುವಲ್ಲಿ ತಾವು ವಿಳಂಬ ಮಾಡದೇ ತಮ್ಮ ಬಾಕಿ ಇರುವ ನೀರಿನ ಕರವನ್ನು ನಗರಸಭೆಗೆ ಪಾವತಿಸಬೇಕೆಂದು ತಿಳಿಸಿರುತ್ತಾರೆ. ಒಂದು ವೇಳೆ ಈ ರೀತಿ ಮಾಡದೇ ಹೋದ ಸಂದರ್ಭದಲ್ಲಿ ತಮಗೆ ದಂಡ ವಿಧಿಸಿ ತಮ್ಮ ನೀರಿನ ನಳವನ್ನು ಬಂದ್ ಮಾಡಲಾಗುವುದು ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜನೌಷಧಿ ಕೇಂದ್ರದಲ್ಲಿ ಹಿರಿಯ ನಾಗರಿಕರ ಆರೋಗ್ಯ ತಪಾಸಣಾ ಶಿಬಿರ

# ಜನೌಷಧಿ ಕೇಂದ್ರ ಬಡವರ ಸಂಜೀವಿನಿ

■ವಿಜಯಸಾಕ್ಷಿ ಸುದ್ದಿ, ಗದಗ

ಕೇಂದ್ರ ಸರ್ಕಾರದ ಅನುಮತಿಯ ಮೇರೆಗೆ ಹಿರಿಯ ನಾಗರಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜನೆ ಮಾಡಲಾಗಿದ್ದು, ಹಿರಿಯ ನಾಗರಿಕರು ಈ ಶಿಬಿರದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕು. ಬಡವರ ಪಾಲಿಗೆ ಜನೌಷಧಿ ಕೇಂದ್ರವು ಸಂಜೀವಿನಿ ಇದ್ದಂತೆ ಎಂದು ಗದಗ-ಬೆಟಗೇರಿ ನಗರಸಭೆ ಮಾಜಿ ಸದಸ್ಯ ಹಾಗೂ ಜನೌಷಧಿ ಕೇಂದ್ರದ ಮಾಲಕರದ ಮಂಜುನಾಥ ಎಚ್.ಮುಳಗುಂದ ಅಭಿಪ್ರಾಯಪಟ್ಟರು.

ಇಲ್ಲಿನ ಹುಯಿಲಗೋಳ ನಾರಾಯಣರಾವ್ ವೃತ್ತದ ಬಳಿ ಇರುವ ಜನೌಷಧಿ ಕೇಂದ್ರದಲ್ಲಿ ಆಯೋಜಿಸಿದ್ದ ಹಿರಿಯ ನಾಗರಿಕರ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ದೇಶಿಸಿ ಅವರು ಮಾತನಾಡಿದರು.

> ಕಳೆದ 7 ವರ್ಷಗಳಿಂದ ಜನೌಷಧಿ ಕೇಂದ್ರಗಳಲ್ಲಿ ಮಾತ್ರೆಯನ್ನು ಖರೀದಿ ಮಾಡುತ್ತಿದ್ದೇನೆ. ಮಧ್ಯಮ ವರ್ಗದವರಿಗೆ ಈ ಕೇಂದ್ರ ಸಾಕಷ್ಟು ಪ್ರಯೋಜನವಾಗಿದೆ. ಕೇಂದ್ರದ ಬಗ್ಗೆ ಇನ್ನಷ್ಟು ಹೆಚ್ಚು ಪ್ರಚಾರ ಸಿಗುವ ಅವಶ್ಯಕತೆ ಇದ್ದು, ಹೆಚ್ಚು ಹೆಚ್ಚು ಜನರು ಜನೌಷಧಿ ಕೇಂದ್ರಕ್ಕೆ ಆಗಮಿಸಿ ತಮ್ಮ ಆರ್ಥಿಕ ಹೊರೆಯನ್ನು ತಗ್ಗಿಸಿಕೊಳ್ಳಬೇಕು. ಈ ಕೇಂದ್ರದಿಂದಾಗಿ ನನ್ನ ಹಣ ಸಾಕಷ್ಟು ಉಳಿತಾಯವಾಗಿದೆ.
>
> – ಮಂಜುನಾಥ ಶಾಂತಗೇರಿ.
> ಜನೌಷಧಿ ಕೇಂದ್ರದ ಗ್ರಾಹಕ.




ಕಳೆದ 10 ವರ್ಷದ ಹಿಂದೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜನ ಔಷಧಿ ಕೇಂದ್ರ ಆರಂಭ ಮಾಡಿದರು. ಇದರಿಂದ ಬಡವರು ಹಾಗೂ ಮಧ್ಯಮ ವರ್ಗದವರಿಗೆ ಸಾಕಷ್ಟು ಅನುಕೂಲವಾಗಿದೆ. ಜನ ಔಷಧಿ ಕೇಂದ್ರದಲ್ಲಿ ಜನ ಸಾಮಾನ್ಯರ ಕೈಗೆಟುಕುವ ದರದಲ್ಲಿ ಔಷಧಿಗಳು ದೊರಕುತ್ತವೆ ಎಂದು ಹೇಳಿದರು.

ಕ್ಯಾನ್ಸರ್, ಸಕ್ಕರೆ ಕಾಯಿಲೆ ಸೇರಿದಂತೆ ಹತ್ತು ಹಲವಾರು ದೀರ್ಘಕಾಲದ ಕಾಯಿಲೆಗಳಿಗೆ ನಿರಂತರವಾಗಿ ಔಷಧಿ ಸೇವನೆ ಮಾಡುವುದು ಅನಿವಾರ್ಯ. ಇಂತಹ ಸಂದರ್ಭದಲ್ಲಿ ಅತ್ಯಂತ ಕಡಿಮೆ ಬೆಲೆಗೆ ಜನ ಔಷಧಿ ಕೇಂದ್ರದಲ್ಲಿ ಮಾತ್ರೆಗಳು ಸಿಗುತ್ತಿರುವುದು ಸಂತೋಷದ ವಿಷಯ. ಸಾರ್ವಜನಿಕರು ಜನೌಷಧಿ ಕೇಂದ್ರದ ಸಂಪೂರ್ಣ ಉಪಯೋಗವನ್ನು ಪಡೆಯಬೇಕು. ಇದರಿಂದ ತಮ್ಮ ಆರೋಗ್ಯ ಕಾಪಾಡಿಕೊಳ್ಳುವುದರ ಜೊತೆಗೆ ಆರ್ಥಿಕ ಹೊರೆಯನ್ನು ತಪ್ಪಿಸಬಹುದು ಎಂದು ಹೇಳಿದರು.

ಹಲವು ವರ್ಷಗಳ ಹಿಂದೆ ಪ್ರಪ್ರಥಮ ಬಾರಿಗೆ ಜನೌಷಧಿ ಕೇಂದ್ರವನ್ನು ಬೆಟಗೇರಿಯಲ್ಲಿ ಪ್ರಾರಂಭ ಮಾಡಲಾಯಿತು. ಸಾರ್ವಜನಿಕರಿಂದ ಸಾಕಷ್ಟು ಪ್ರಶಂಸೆ ವ್ಯಕ್ತವಾದ ಹಿನ್ನೆಲೆಯಲ್ಲಿ ನಗರದ ಹೃದಯ ಭಾಗದಲ್ಲಿರುವ ಟಾಂಗಾಕೂಟದಲ್ಲಿ ಕಳೆದ ಮೂರು ವರ್ಷಗಳ ಹಿಂದೆ ಕೇಂದ್ರವನ್ನು ಪ್ರಾರಂಭಿಸಲಾಗಿದ್ದು, ಇಲ್ಲಿಯೂ ಯಶಸ್ವಿಯಾಗಿ ನಡೆಯುತ್ತಿದೆ ಎಂದರು.

> ಜನೌಷಧಿ ಕೇಂದ್ರದಲ್ಲಿರುವ ಮಾತ್ರೆಗಳು ಹೆಚ್ಚು ಪ್ರಯೋಜನ ಆಗುವುದಿಲ್ಲ ಎನ್ನುವ ಅಪಪ್ರಚಾರವಿದೆ. ಆದರೆ, ಮಾರುಕಟ್ಟೆಯಲ್ಲಿ ಸಿಗುವ ಔಷಧಿಗಳಷ್ಟೇ ಪರಿಣಾಮಕಾರಿಯಾಗಿ ಜನ ಔಷಧಿ ಕೇಂದ್ರದಲ್ಲಿರುವ ಔಷಧಿಗಳು ಕಾರ್ಯನಿರ್ವಹಿಸುತ್ತಿವೆ. ಸಾರ್ವಜನಿಕರು ಹೆಚ್ಚಿನ ಪ್ರಮಾಣದಲ್ಲಿ ಜನ ಔಷಧಿ ಕೇಂದ್ರದಲ್ಲಿ ಔಷಧಿ ಖರೀದಿ ಮಾಡಲು ಮುಂದೆ ಬರಬೇಕು.
>
> – ಮಂಜುನಾಥ ಮುಳಗುಂದ.
> ಜನೌಷಧಿ ಕೇಂದ್ರದ ಮಾಲಕ.

ಈ ವೇಳೆ ತಜ್ಞ ವೈದ್ಯರಾದ ಡಾ. ಸಿ.ಎಸ್. ಹನುಮಂತಗೌಡ್ರ, ಪರಪ್ಪ ಕಮತರ, ಕಾರ್ತಿಕ್ ಮಾರನಬಸರಿ, ರೇಖಾ ತಳವಾರ, ವಿರುಪಾಕ್ಷಪ್ಪ ಗಾಳಪ್ಪನವರ, ಅಲ್ಲಾಸಾಬ್ ಗದುಗಿನ, ಸಕ್ಕುಬಾಯಿ ಬಾಗಲಕೋಟಿ, ನಿಂಗಮ್ಮ ಬೆಳಧಡಿ, ಪರಶುರಾಮ ನಿಲಗಾರ, ದಶರಥ ಮಿರಜಕರ್, ಶಿವಪುತ್ರಪ್ಪ ಪಟ್ಟಣಶೆಟ್ಟಿ, ಕೃಷ್ಣಮೂರ್ತಿ ಗುಡೂರ, ಶ್ರೀನಿವಾಸ ಸಿಂಗ್ ರಜಪೂತ, ಬಸವರಾಜ ಕೊತಂಬ್ರಿ, ವಸಂತ ಶೆಲೂಡಿ ಮುಂತಾದವರು ಉಪಸ್ಥಿತರಿದ್ದರು.

## ಕಾಮರತಿ ಉತ್ಸವ ಸಮಿತಿಯ ಪದಾಧಿಕಾರಿಗಳ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ



ಗದಗ-ಬೆಟಗೇರಿ ನಗರದ ಹಾಳದಿಬ್ಬ ಓಣಿಯಲ್ಲಿ ಮಾರ್ಚ್ 14ರಂದು ಹೋಳಿ ಹುಣ್ಣಿಮೆ ನಿಮಿತ್ತ 5 ದಿನಗಳ ಕಾಲ ಕಾಮರತಿ ದೇವಿಯರನ್ನು ಪ್ರತಿಷ್ಠಾಪಿಸಿ ಐದನೇ ದಿನದಂದು ರಂಗಪಂಚಮಿಯನ್ನು ವಿಜೃಂಭಣೆಯಿಂದ ಆಚರಿಸಲಾಗುವುದು.

ಈ ನಿಟ್ಟಿನಲ್ಲಿ ಹಾಳದಿಬ್ಬ ವಿವಿಧೋದ್ದೇಶಗಳ ಸೇವಾ ಸಂಸ್ಥೆಯ ವತಿಯಿಂದ 2025ನೇ ಸಾಲಿನ ಕಾಮರತಿ ಉತ್ಸವ ಸಮಿತಿ ಗೌರವಾಧ್ಯಕ್ಷರಾಗಿ ಅಶೋಕ ಮಂದಾಲಿ, ಅಧ್ಯಕ್ಷರಾಗಿ ಯಲ್ಲನಗೌಡ ದೇಸಾಯಿ, ಉಪಾಧ್ಯಕ್ಷರಾಗಿ ಉಪೇಂದ್ರ ಹುಯಿಲಗೊಳ, ಖಜಾಂಚಿಯಾಗಿ ಕಿರಣ ಹಿರೇಮಠ, ಕಾರ್ಯದರ್ಶಿಯಾಗಿ ರಾಕೇಶ ನವಲಗುಂದ, ಸಂಪರ್ಕ ಪ್ರಮುಖರಾಗಿ ಸಾಗರ ಹುಯಿಲಗೋಳ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಹಾಳದಿಬ್ಬ ವಿವಿಧೋದ್ದೇಶಗಳ ಸೇವಾ ಸಂಸ್ಥೆಯ ಅಧ್ಯಕ್ಷ ಕುಮಾರ ಮಂದಾಲಿಯವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಆರೋಗ್ಯದ ಕುರಿತು ಕಾಳಜಿ ಅಗತ್ಯ

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಇಂದಿನ ಜೀವನ ಶೈಲಿಯಲ್ಲಿ ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಇಲ್ಲದಿದ್ದಲ್ಲಿ ಅನಾರೋಗ್ಯಕ್ಕೆ ತುತ್ತಾಗುವುದರಲ್ಲಿ ಅನುಮಾನವೇ ಇಲ್ಲ ಎಂದು ಕಣವಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಣಾಧಿಕಾರಿ ನವೀನ ಸಾವಂತ ಹೇಳಿದರು.

ಅವರು ಪಟ್ಟಣದ ಕಣವಿ ಗ್ರಾಮದ ಗ್ರಾಮದೇವಿ ದೇವಸ್ಥಾನದಲ್ಲಿ ಕಣವಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಜೈ ಭೀಮ ಜನಪದ ಕಲಾ ಸಂಘದ ವತಿಯಿಂದ ಆರೋಗ್ಯ ಕೇಂದ್ರದ ವಿವಿಧ ಯೋಜನೆಗಳ ಅರಿವು ಕಾರ್ಯಕ್ರಮ ಉದ್ಘಾಟಿಸಿದ ಮಾತನಾಡಿದರು.



ಇಂದು ಆಧುನಿಕತೆ ಬೆಳೆದಂತೆ ಅನೇಕ ರೋಗಗಳು ನಮ್ಮನ್ನು ಆವರಿಸುತ್ತಿದ್ದು, ಉತ್ತಮ ಪೌಷ್ಟಿಕ ಆಹಾರ ಸೇವಿಸದೇ ಇರುವುದು ನಮ್ಮ ಅನಾರೋಗ್ಯಕ್ಕೆ ಕಾರಣವಾಗಿದೆ. ಉತ್ತಮ ಆರೋಗ್ಯ ಹೊಂದಲು ಆರೋಗ್ಯ ಇಲಾಖೆಯಿಂದ ಹಲವಾರು ಯೋಜನೆಗಳಿವೆ. ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಕಂಕಣಬದ್ಧರಾಗಿದ್ದು, ಪ್ರತಿಯೊಬ್ಬರೂ ಆರೋಗ್ಯ ಕಾಳಜಿಯ ಅರಿವು ಪಡೆದುಕೊಳ್ಳುವ ಅಗತ್ಯವಿದೆ ಎಂದರು.

ಹರ್ತಿ ಗ್ರಾ.ಪಂ ಮಾಜಿ ಅಧ್ಯಕ್ಷೆ ಪಾರ್ವತೆವ್ವ ಕುರ್ತಕೋಟಿ ಕಾರ್ಯಕ್ರಮ ಉದ್ಘಾಟಿಸಿದರು. ಗ್ರಾ.ಪಂ ಸದಸ್ಯ ಕೃಷ್ಣಾ ನಾಗಲೋಟಿ, ಗಂಗಾಧರ ಗಡಾದ, ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ ಪುಷ್ಪಾ ಪಾಟೀಲ, ಆರೋಗ್ಯ ನಿರೀಕ್ಷಣಾಧಿಕಾರಿ ಆರ್.ವಿ. ಗುರಣ್ಣವರ, ರೇಷ್ಮಾ ಹಾಳಕೇರಿ, ಅನ್ನಪೂರ್ಣಾ ಬೂದಿಹಾಳ, ಪಾರ್ವತಿ ಇಂಗಳಹಳ್ಳಿ, ಸರೋಜಾ ವೆಂಕಟಾಪೂರ ಹಾಗೂ ಗ್ರಾಮದ ಸಾರ್ವಜನಿಕರು ಇದ್ದರು.

### ಮಹಾ ಶಿವರಾತ್ರಿ ಅಂಗವಾಗಿ ಜರುಗಿದ ಶಿವಲಿಂಗ ಮೆರವಣಿಗೆಯಲ್ಲಿ ಬಿ.ಕೆ ಶೋಭಾಜಿ

# ರೈತರು, ಸೈನಿಕರು ದೇಶದ ಕಣ್ಣು

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ದೇಶದಲ್ಲಿ ಶಾಂತಿ ನೆಲೆಸಲು ಸೈನಿಕರು ಕಾರಣ. ಹಾಗೆಯೇ ದೇಶದ ಜನತೆಗೆ ಅನ್ನ ನೀಡುವ ರೈತ ಇವರಿಬ್ಬರ ಪರಿಶ್ರಮದಿಂದ ದೇಶ ಶಾಂತಿ-ಸುಭಿಕ್ಷೆಯಿಂದ ಇದೆ ಎಂದು ಕುಷ್ಟಗಿಯ ಈಶ್ವರೀಯ ವಿಶ್ವ ವಿದ್ಯಾಲಯದ ಸೇವಾ ಸಂಚಾಲಕರಾದ ಶೋಭಾಜಿ ಹೇಳಿದರು.

ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿಗಳ ಗವಿಮಠದಲ್ಲಿ ಈಶ್ವರೀಯ ವಿಶ್ವ ವಿದ್ಯಾಲಯದಿಂದ ಮಹಾ ಶಿವರಾತ್ರಿ ಅಂಗವಾಗಿ ಜರುಗಿದ ಶಿವಲಿಂಗ ಮೆರವಣಿಗೆ ಉದ್ಘಾಟಿಸಿ ಮಾತನಾಡಿದ ಅವರು, ಆಧುನಿಕತೆ ಬೆಳೆದಂತೆ ಆಹಾರ ಪದ್ಧತಿ ಬದಲಾಗಿರಬಹುದು. ಆದರೆ ಇಂದು ನಾವೆಲ್ಲರೂ ಎಷ್ಟೇ ಸಂಪತ್ತು ಹೊಂದಿದ್ದರೂ ತಿನ್ನುವ ಆಹಾರ ಮಾತ್ರ ರೈತನ ಬೆವರಿನ ಹನಿಯಿಂದ ಬಂದಿದೆ. ರೈತರು ಯಾವುದೇ ಆಶೆ-ಆಕಾಂಕ್ಷೆ ಇಲ್ಲದೇ ಜಗತ್ತಿನ ಜನರಿಗಾಗಿ ನಿತ್ಯ ಶ್ರಮವಹಿಸಿ ಕಾಯಕಯೋಗಿಯಾದರೆ, ನಾವೆಲ್ಲರೂ ನಿತ್ಯ ನೆಮ್ಮದಿಯಾಗಿ ಬದುಕಲು ಸಾಧ್ಯ. ಹೀಗಾಗಿ, ಸೈನಿಕರು ಮತ್ತು ರೈತರನ್ನು ನಿತ್ಯ ನಾವೆಲ್ಲರೂ ನೆನೆಯಬೇಕು.




ಇಂದು ಕಾಮ, ಕ್ರೋಧ, ಮೋಹ, ಮದ, ಮತ್ಸರ ತುಂಬಿಕೊಂಡು ನಿತ್ಯ ನಮ್ಮ ಬದುಕನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ. ನಾವೆಲ್ಲರೂ ಸುಖೀ ಜೀವನ ನಡೆಸಲು ನಿತ್ಯ ಶಿವನ ಸ್ಮರಣೆಯಲ್ಲಿ ಕಾಲ ಕಳೆಯಬೇಕು ಹಾಗೂ ಮಕ್ಕಳಲ್ಲಿ ಶಿವನ ಆರಾಧನೆ ಕುರಿತು ಸಂಸ್ಕಾರ ನೀಡಿದಲ್ಲಿ ಸುಖೀ ಜೀವನ ನಡೆಸಬಹುದು ಎಂದರು.

> ಈ ಸಂದರ್ಭದಲ್ಲಿ ರೈತರು ಹಾಗೂ ಸೈನಿಕರನ್ನು ಗೌರವಿಸಲಾಯಿತು. ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆ ನಂ 1ರ ಮಕ್ಕಳು ಶಿವನ ಕುರಿತು ನಾಟಕ ಪ್ರಸ್ತುತಪಡಿಸಿದರು. ಶಿವನ ಪಾತ್ರವನ್ನು ಕಾರ್ತಿಕ ಸಿಗ್ಗಾವಿ, ತಂದೆಯ ಪಾತ್ರವನ್ನು ತೌಸಿಫ್ ಖವಾಸ, ಮಗಳ ಪಾತ್ರವನ್ನು ಶ್ರೀನಿಧಿ ಸಿದ್ದನಗೌಡ್ರ ನಿರ್ವಹಿಸಿದರು.

ಸಾನ್ನಿಧ್ಯವನ್ನು ಗದುಗಿನ ಅಡವಿಂದ್ರಸ್ವಾಮಿ ಮಠದ ಮಹೇಶ್ವರಸ್ವಾಮಿಗಳು ವಹಿಸಿದ್ದರು. ನೇತೃತ್ವವನ್ನು ಬ್ರಹ್ಮಕುಮಾರಿ ಶಿವಾನಿಜಿ, ಅಧ್ಯಕ್ಷತೆಯನ್ನು ಎಂ.ಡಿ. ಬಟ್ಟೂರ ವಹಿಸಿದ್ದರು. ಡಾ. ಎಸ್.ಸಿ. ಚವಡಿ, ಗೌರಮ್ಮಾ ಬಡ್ನಿ, ಹರ್ಷಲತಾ ದೇಶಪಾಂಡೆ, ವಿಜಯ ನೀಲಗುಂದ, ಅಶೋಕ ಸೋನಗೋಜಿ, ರಾಮಣ್ಣಾ ಕಮಾಜಿ, ಸಿದ್ದಲಿಂಗೇಶ ಕುರ್ತಕೋಟಿ, ಬಸವರಾಜ ಬಾತಾಖಾನಿ, ಮಾಹಾಂತೇಶ ಕೋರಿ, ದೇವರಾಜ ಸಂಗನಪೇಟಿ ಯೋಗ ಶಿಕ್ಷಕ ಪ್ರಕಾಶ ಮದ್ದಿನ ಇದ್ದರು.

## ಉತ್ತರ ಭಾರತದಲ್ಲಿ ತಮಿಳು ಪ್ರಚಾರ ಸಭಾ ಏಕಿಲ್ಲ? ಕೇಂದ್ರ ಸರ್ಕಾರಕ್ಕೆ ಸಿಎಂ ಸ್ಟಾಲಿನ್ ಪ್ರಶ್ನೆ

■ವಿಜಯಸಾಕ್ಷಿ ಸುದ್ದಿ, ತಮಿಳುನಾಡು

ದಕ್ಷಿಣ ಭಾರತದ ರಾಜ್ಯಗಳಲ್ಲಿ ಹಿಂದಿಯನ್ನು ಉತ್ತೇಜಿಸಲು 'ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ' ಒಂದು ಶತಮಾನಕ್ಕೂ ಹೆಚ್ಚು ಕಾಲದಿಂದ ಅಸ್ತಿತ್ವದಲ್ಲಿದ್ದರೂ, ಉತ್ತರ ಭಾರತದಲ್ಲಿ 'ಉತ್ತರ ಭಾರತ ತಮಿಳು ಪ್ರಚಾರ ಸಭಾ' ಏಕೆ ಸ್ಥಾಪಿಸಲಿಲ್ಲ? ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಈ ಕುರಿತು ಪೋಸ್ಟ್ ಹಾಕಿರುವ ಸ್ಟಾಲಿನ್ "ದಕ್ಷಿಣ ಭಾರತೀಯರು ಹಿಂದಿ ಕಲಿಯುವಂತೆ ಮಾಡಲು ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯನ್ನು ಸ್ಥಾಪಿಸಿ ಒಂದು ಶತಮಾನ ಕಳೆದಿದೆ. ಈ ಅವಧಿಯಲ್ಲಿ ಉತ್ತರ ಭಾರತದಲ್ಲಿ ಎಷ್ಟು ಉತ್ತರ ಭಾರತ ತಮಿಳು ಪ್ರಚಾರ ಸಭೆಗಳನ್ನು ಸ್ಥಾಪಿಸಲಾಗಿದೆ? ಸತ್ಯವೆಂದರೆ, ಉತ್ತರ ಭಾರತೀಯರು ತಮಿಳು ಅಥವಾ ಯಾವುದೇ ದಕ್ಷಿಣ ಭಾರತೀಯ ಭಾಷೆಯನ್ನು 'ಸಂರಕ್ಷಿಸುವ ಸಲುವಾಗಿ ಕಲಿಯಬೇಕೆಂದು ನಾವು ಎಂದಿಗೂ ಒತ್ತಾಯಿಸಿಲ್ಲ. ನಮ್ಮ ಮೇಲೆ ಹಿಂದಿ ಹೇರಿಕೆಯನ್ನು ನಿಲ್ಲಿಸಿ ಎಂದು ಮಾತ್ರ ನಾವು ಕೇಳಿಕೊಳ್ಳುತ್ತಿದ್ದೇವೆ. ಬಿಜೆಪಿ ಆಡಳಿತದ ರಾಜ್ಯಗಳು ಮೂರು ಅಥವಾ 30 ಭಾಷೆಗಳನ್ನು ಕಲಿಸಲಿ, ಅದು ಅವರಿಗೆ ಬಿಟ್ಟಿದ್ದು, ಆದರೆ, ತಮಿಳುನಾಡನ್ನು ಬಿಟ್ಟುಬಿಡಿ!" ಎಂದು ಬರೆದುಕೊಂಡಿದ್ದಾರೆ.

ತಮಿಳುನಾಡು ಮತ್ತು ದಕ್ಷಿಣದ ಇತರ ರಾಜ್ಯಗಳಲ್ಲಿ ಹಿಂದಿ ಹೇರಿಕೆಗೆ ತಮ್ಮ ವಿರೋಧವನ್ನು ಪುನರುಚ್ಚರಿಸಿದ ಸಿಎಂ ಸ್ಟಾಲಿನ್, "ಉತ್ತರದ ರಾಜ್ಯಗಳು ತಮಿಳು ಕಲಿಯಬೇಕೆಂದು ತಮಿಳುನಾಡು ಎಂದಿಗೂ ಒತ್ತಾಯಿಸಿಲ್ಲ" ಎಂದು ಒತ್ತಿ ಹೇಳಿದ್ದಾರೆ.

## ಅಮೆರಿಕದ ಆಮದುಗಳ ಮೇಲೆ ಶೇ. 15 ರಷ್ಟು ಪ್ರತೀಕಾರದ ಸುಂಕ ವಿಧಿಸಿದ ಚೀನಾ

■ವಿಜಯಸಾಕ್ಷಿ ಸುದ್ದಿ, ಚೀನಾ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜಾರಿ ಮಾಡಿದ ಚೀನಾ ಮೇಲಿನ ಸುಂಕಗಳು ಮಂಗಳವಾರ ಜಾರಿಗೆ ಬಂದಿದ್ದು, ಚೀನಾ ಅಮೆರಿಕದ ಉತ್ಪನ್ನಗಳ ಮೇಲೆ ಹೊಸ ಸುಂಕಗಳನ್ನು ವಿಧಿಸಿದೆ. ಮಾರ್ಚ್ 10 ರಿಂದ ಬೀಜಿಂಗ್ ಕೆಲವು ಅಮೆರಿಕದ ಆಮದುಗಳ ಮೇಲೆ 10-15% ಸುಂಕವನ್ನು ವಿಧಿಸಲಿದೆ ಎಂದು ಚೀನಾ ಹಣಕಾಸು ಸಚಿವಾಲಯ ತಿಳಿಸಿದೆ. ಇತ್ತೀಚಿನ ಚೀನಾದ ಸುಂಕಗಳು ಹಲವಾರು ಅಮೇರಿಕನ್ ಕೃಷಿ ಮತ್ತು ಆಹಾರ ಉತ್ಪನ್ನಗಳನ್ನು ಒಳಗೊಳ್ಳುತ್ತವೆ.

ಟ್ರಂಪ್ ಅವರು ಚೀನಾದ ಉತ್ಪನ್ನಗಳ ಮೇಲಿನ ಸುಂಕವನ್ನು ಶೇ. 20 ಕ್ಕೆ ದ್ವಿಗುಣಗೊಳಿಸಿದ ನಂತರ ಈ ಕ್ರಮ ಕೈಗೊಳ್ಳಲಾಗಿದೆ. "ಮಾರ್ಚ್ 10 ರಿಂದ ಬೀಜಿಂಗ್ ಅಮೆರಿಕದ ಕೋಳಿ, ಗೋಧಿ, ಜೋಳ ಮತ್ತು ಹತ್ತಿಯ ಮೇಲೆ ಹೆಚ್ಚುವರಿ ಶೇ. 15 ರಷ್ಟು ಸುಂಕವನ್ನು ಮತ್ತು ಯುಎಸ್ ಸೋಯಾಬೀನ್, ಸೋರ್ಗಮ್, ಹಂದಿಮಾಂಸ, ಗೋಮಾಂಸ, ಜಲಚರ ಉತ್ಪನ್ನಗಳು, ಹಣ್ಣುಗಳು ಮತ್ತು ತರಕಾರಿಗಳು ಮತ್ತು ಹಾಲಿನ ಉತ್ಪನ್ನಗಳ ಆಮದಿನ ಮೇಲೆ ಶೇ. 10 ರಷ್ಟು ಹೆಚ್ಚುವರಿ ಸುಂಕವನ್ನು ವಿಧಿಸಲಿದೆ" ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

ಮಂಗಳವಾರ, ಬೀಜಿಂಗ್ ತನ್ನ ವಿಶ್ವಾಸಾರ್ಹವಲ್ಲದ ಘಟಕದ ಪಟ್ಟಿಯಲ್ಲಿ ಇನ್ನೂ 10 ಅಮೇರಿಕನ್ ಕಂಪನಿಗಳನ್ನು ಇರಿಸಿದೆ. ಇದು ಅವುಗಳನ್ನು ಚೀನಾ-ಸಂಬಂಧಿತ ಆಮದು ಅಥವಾ ರಫ್ತು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದನ್ನು ಮತ್ತು ದೇಶದಲ್ಲಿ ಹೊಸ ಹೂಡಿಕೆಗಳನ್ನು ಮಾಡುವುದನ್ನು ತಡೆಯುತ್ತದೆ.

### ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯಲ್ಲಿ ಫೇವರ್ಸ್ ಜೋಡಣೆ ಕಾಮಗಾರಿಗೆ ಚಾಲನೆ

# ಗುಣಮಟ್ಟದ ಶಿಕ್ಷಣ ನೀಡುವಲ್ಲಿ ರಾಜ್ಯಕ್ಕೆ ಮಾದರಿ

■ವಿಜಯಸಾಕ್ಷಿ ಸುದ್ದಿ, ಗದಗ

ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯನ್ನು ಸಭಾಪತಿ ಬಸವರಾಜ ಹೊರಟ್ಟಿ ದಂಪತಿಗಳು ದತ್ತು ಪಡೆದ ಮೇಲೆ ಎಲ್ಲ ಮೂಲಭೂತ ಸೌಕರ್ಯಗಳನ್ನು ಹೊಂದಿ, ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ರಾಜ್ಯಕ್ಕೆ ಮಾದರಿಯಾಗಿ ಬೆಳೆದು ನಿಂತಿರುವುದು ಗದಗ ಜಿಲ್ಲೆಗೆ ಹೆಮ್ಮೆಯ ಸಂಗತಿ ಎಂದು ಗದಗ-ಬೆಟಗೇರಿ ನಗರಸಭೆಯ ಸದಸ್ಯೆ ವಿದ್ಯಾವತಿ ಗಡಗಿ ಅಭಿಪ್ರಾಯಟ್ಟರು.

ಅವರು ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯಲ್ಲಿ ಗದಗ-ಬೆಟಗೇರಿ ನಗರಸಭೆಯ ಅನುದಾನದ ಅಡಿಯಲ್ಲಿ ನಿರ್ಮಾಣಗೊಳ್ಳಲಿರುವ ಶಾಲೆಯ ಮುಂಭಾಗಕ್ಕೆ ಫೇವರ್ಸ್ ಜೋಡಣೆ-ಯ ಭೂಮಿ ಪೂಜಾ ಸಮಾರಂಭದಲ್ಲಿ ಪೂಜೆ ನೆರವೇರಿಸಿ ಮಾತನಾಡಿದರು.



ಈ ಸಂದರ್ಭದಲ್ಲಿ ಡಾ. ಬಸವರಾಜ ಧಾರವಾಡ, ಡಿ.ಡಿ.ಪಿ.ಐ. ಆರ್.ಎಸ್. ಬುರಡಿ, ಕ್ಷೇತ್ರ ಶಿಕ್ಷಣಾಧಿಕಾರಿ ರವೀಂದ್ರ ಶೆಟ್ಟೆಪ್ಪನವರ, ಎಸ್.ಡಿ.ಎಂ.ಸಿ ಅಧ್ಯಕ್ಷರಾದ ರೇಣುಕಾ ರೋಣದ, ಸದಸ್ಯರಾದ ಶಿವಪ್ಪ ಶಿವಶಿಂಪಿಗೇರ, ಯುವ ಉದ್ಯಮಿ ಕಿರಣ ಭೂಮಾ, ಎಸ್.ಎಂ. ಅಗಡಿ, ಪಿ.ಆರ್. ಇನಾಮದಾರ, ನಿವೃತ್ತ ಶಿಕ್ಷಕ ಕುಬೇರ, ಕ.ರ.ವೇ ಅಧ್ಯಕ್ಷರಾದ ನಿಂಗನಗೌಡ ಮಾಲಿಪಾಟೀಲ, ಗುತ್ತಿಗೆದಾರ ವಾಸಿಂ ಕುನ್ನಿಭಾವಿ, ಪ್ರಭಾರಿ ಮುಖ್ಯೋಪಾಧ್ಯಾಯರಾದ ಜಯಲಕ್ಷ್ಮೀ ಅಣ್ಣಿಗೇರಿ, ಶಂಕ್ರಮ್ಮ ಆರ್.ಹಣಮಗೌಡ್ರು, ಎಂ.ಐ. ಶಿವನಗೌಡ್ರು, ಮಂಜುಳಾ. ಪಿ.ಸಾಮ್ರಾಣಿ, ಸುಮಂಗಲಾ ಎಂ.ಪತ್ತಾರ್, ಶಾರದಾ ಬಾಣದ, ಶೋಭಾ ಎಸ್.ಗಾಳಿ, ರಮೇಶ್ ಬಸರಿ, ಸಾವಿತ್ರಿ ಎ.ಗದ್ದನಕೇರಿ, ಎನ್.ಆರ್. ಶಿರೋಳ್, ಸಬಿಯಾ ಯು.ಕುಷ್ಟಗಿ, ಗಂಗಾ ಎಂ.ಅಳವಂಡಿ, ಮಂಜುಳಾ ಟಿ, ಶಶಿಕಲಾ ಬಿ.ಗುಳೇದವರ, ಪದ್ಮಾ ವಿ.ದಾಸರ್, ಲಕ್ಷ್ಮಮ್ಮ ಮಾಳೋತ್ತರ್, ಶಾರದಾ ಬಾಣದ ಮುಂತಾದವರು ಉಪಸ್ಥಿತರಿದ್ದರು. ಸಂಜೀವಿನಿ ಕೂಲಗುಡಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

> ಕೇವಲ ಎರಡು ವರ್ಷಗಳಲ್ಲಿ ಈ ಶಾಲೆ ಎಲ್ಲ ಅಭಿವೃದ್ಧಿಗಳನ್ನು ಹೊಂದುವ ಮೂಲಕ ಗ್ರಾಮೀಣ ಬಡ, ಪ್ರತಿಭಾವಂತ ವಿದ್ಯಾರ್ಥಿಗಳ ಅಕ್ಷರದ ಹಸಿವನ್ನು ನೀಗಿಸುತ್ತಿದೆ. ಖಾಸಗಿ ಶಾಲೆಗಿಂತ ಯಾವುದಕ್ಕೂ ಕಡಿಮೆ ಇಲ್ಲದೆ ಇಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುತ್ತಿದೆ. ಇಲ್ಲಿರುವ ಎಲ್ಲ ಪ್ರತಿಭಾವಂತ ಶಿಕ್ಷಕರು ಇಲ್ಲಿನ ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಷ್ಟೇ ಕಾಳಜಿ ಮಾಡುತ್ತಿದ್ದಾರೆ. ಹೀಗಾಗಿ ಈ ಶಾಲೆ ಕೆಲವೇ ವರ್ಷಗಳಲ್ಲಿ ರಾಜ್ಯಕ್ಕೆ ನಂ.1 ಶಾಲೆಯಾಗುವದರಲ್ಲಿ ಯಾವುದೇ ಸಂಶಯವಿಲ್ಲ ಎಂದು ವಿದ್ಯಾವತಿ ಗಡಗಿ ಹೇಳಿದರು.

# 'ವಿಕಸಿತ ಭಾರತ ಯೂತ್ ಪಾರ್ಲಿಮೆಂಟ್' ಭಾಷಣ ಸ್ಪರ್ಧೆ

■ವಿಜಯಸಾಕ್ಷಿ ಸುದ್ದಿ, ಗದಗ

ನೆಹರು ಯುವ ಕೇಂದ್ರ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವಾಲಯ ಗದಗ ವತಿಯಿಂದ ಕೇಂದ್ರ ಸರ್ಕಾರದ 'ವಿಕಸಿತ ಭಾರತ ಯೂತ್ ಪಾರ್ಲಿಮೆಂಟ್-2025' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

18ರಿಂದ 25 ವರ್ಷ ವಯಸ್ಸಿನ ದೇಶದ ಎಲ್ಲ ಯುವ ಜನತೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶವಿದ್ದು, ಯುವ ಜನತೆಯಲ್ಲಿ ದೇಶದ ಸಂವಿಧಾನ ಮತ್ತು ಸಂಸತ್ತಿನ ಮಹತ್ವದ ಕುರಿತು ಅರಿವು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಕಾರ್ಯಕ್ರಮದ ಮೊದಲ ಹಂತ ಮಾರ್ಚ್ 9ರವರೆಗೆ ನಡೆಯಲಿದ್ದು, 18ರಿಂದ 25 ವರ್ಷದ ಯುವ ಜನತೆ ಮೈ ಭಾರತ್ ಪೋರ್ಟಲ್‌ನಲ್ಲಿ ರಿಜಿಸ್ಟರ್ ಮಾಡಿಕೊಂಡು 'ನಿಮ್ಮ ದೃಷ್ಟಿಯಲ್ಲಿ ವಿಕಸಿತ ಭಾರತವೆಂದರೆ ಏನು' ಎಂಬ ವಿಷಯದ ಮೇಲೆ 1 ನಿಮಿಷದ ವಿಡಿಯೋವನ್ನು ಅಪ್‌ಲೋಡ್ ಮಾಡುವುದು. ನಂತರ ಆಯ್ಕೆಯಾದ ವಿದ್ಯಾರ್ಥಿಗಳು 'ಒಂದು ದೇಶ ಒಂದು ಚುನಾವಣೆ' ಎಂಬ ವಿಷಯದ ಮೇಲೆ ಪ್ರತಿ ವಿದ್ಯಾರ್ಥಿಗಳಿಗೆ ಮೂರು ನಿಮಿಷದಂತೆ ಮುಖಾಮುಖಿಯಾಗಿ ಸ್ಪರ್ಧೆಯನ್ನು ಏರ್ಪಡಿಸಲಾಗುವುದು. ಇಲ್ಲಿ 5 ಜನರ ತೀರ್ಪುಗಾರರ ಸಮಿತಿಯು ಪ್ರತಿ ನೋಡಲ್ ಜಿಲ್ಲೆಯಿಂದ 10 ಜನರನ್ನು ಆಯ್ಕೆ ಮಾಡಿ ರಾಜ್ಯಮಟ್ಟಕ್ಕೆ ಕಳುಹಿಸಿಕೊಡಲಾಗುವುದು ಎಂದು ನೆಹರು ಯುವ ಕೇಂದ್ರದ ಯುವಜನ ಅಧಿಕಾರಿಗಳು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ-8618215740 ಮತ್ತು ಟಚಿಟ ಎಜ - ಜಥಿಛಿ.ರಚಿಜಚಿರ@ರಚಿಟುಟ.ಛಿಂಟ ಅಥವಾ ಕಚೇರಿ: ನೆಹರು ಯುವ ಕೇಂದ್ರ, ಗದಗ ಎ.ಸಿ ಆಫೀಸ್ ಕಟ್ಟಡ, ಮುಳಗುಂದ ನಾಕ ಹತ್ತಿರ-ಗದಗ ಇಲ್ಲಿಗೆ ಸಂಪರ್ಕಿಸಬಹುದಾಗಿದೆ.

ಶ್ರೀ ಪಂ.ಪುಟ್ಟರಾಜ ಕವಿ ಗವಾಯಿಗಳವರ 111ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಕೃಷ್ಣಗೌಡ ಪಾಟೀಲ ಅಭಿಪ್ರಾಯ

# ಗವಾಯಿಗಳು ಅನಾಥರ ಬಾಳಿನ ನಂದಾದೀಪ

■ವಿಜಯಸಾಕ್ಷಿ ಸುದ್ದಿ, ಗದಗ

ಅಂಧ, ಅನಾಥ, ದೀನ-ದಲಿತ ಸರ್ವ ಸಮಾಜದ ಮಕ್ಕಳನ್ನು ತಮ್ಮ ಆಶ್ರಮದಲ್ಲಿ ಸಾಕಿ ಸಂಗೀತ ವಿದ್ಯೆಯನ್ನು ನೀಡಿದ ಡಾ. ಪಂ. ಪುಟ್ಟರಾಜ ಗವಾಯಿಗಳು ಅಂಧ-ಅನಾಥ ಮಕ್ಕಳ ಬಾಳಿನ ನಂದಾದೀಪವಾಗಿದ್ದಾರೆ ಎಂದು ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಕೃಷ್ಣಗೌಡ ಎಚ್.ಪಾಟೀಲ ಅಭಿಪ್ರಾಯಪಟ್ಟರು.

ಸೋಮವಾರ ಸಂಜೆ ಗದಗ ನಗರದ ವೀರನಾರಾಯಣ ಬಡಾವಣೆ ಹಾಗೂ ಕೆ.ಎಚ್. ಪಾಟೀಲ ಬಡಾವಣೆಯ ಶ್ರೀ ಪಂ. ಪುಟ್ಟರಾಜ ಸಮಾಜ ಸೇವಾ ಟ್ರಸ್ಟ್‌ನ 3ನೇ ವರ್ಷದ ವಾರ್ಷಿಕೋತ್ಸವ, ಶ್ರೀ ಪಂ.ಪುಟ್ಟರಾಜ ಕವಿ ಗವಾಯಿಗಳವರ 111ನೇ ಜಯಂತ್ಯುತ್ಸವ ಹಾಗೂ ಸಂಗೀತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗವಾಯಿಗಳ ಸ್ಮರಣೆಯ ಸಲುವಾಗಿ ವಿವಿಧ ರಚನಾತ್ಮಕ ಕಾರ್ಯಗಳನ್ನು ಹಮ್ಮಿಕೊಂಡಿರುವದು ಸಂತಸದ ವಿಷಯ. ಗವಾಯಿಗಳು ಜಗತ್ತಿನ ಸಂಗೀತ ಲೋಕದ ಮಿನುಗುವ ತಾರೆಯಾಗಿದ್ದಾರೆ. ಅವರ ತತ್ವ-ಆದರ್ಶಗಳನ್ನು ನಾವೆಲ್ಲರೂ ಜೀವನದಲ್ಲಿ ರೂಢಿಸಿಕೊಳ್ಳಬೇಕು ಎಂದರು.

ಮುಖ್ಯ ಅತಿಥಿಗಳಾದ ಗದಗ ಶಹರ ಕಾಂಗ್ರೆಸ್ ಅಧ್ಯಕ್ಷ ಬಿ.ಬಿ. ಅಸೂಟಿ ಮಾತನಾಡಿ, ಪಂ.ಪುಟ್ಟರಾಜ ಗವಾಯಿಗಳು ನಡೆದಾಡುವ ದೇವರಾಗಿ ಸಂಗೀತ ಸಾಮ್ರಾಜ್ಯ ನಿರ್ಮಿಸಿದ್ದಾರೆ. ಅವರು ಭಕ್ತರಿಗೆ ಧರ್ಮದ ದಾರಿಯಲ್ಲಿ ನಡೆದರೆ ನಿಮಗೆ ಯಾವ ಕಷ್ಟಗಳು ಬರುವುದಿಲ್ಲ, ನಿವೆಲ್ಲರೂ ಧರ್ಮ ಮಾರ್ಗದಲ್ಲಿ ನಡೆದಾಗ ಮಾತ್ರ ನೆಮ್ಮದಿಯ ಜೀವನ ನಡೆಸಲು ಸಾಧ್ಯ ಎಂಬ ಸಂದೇಶ ಸಾರಿದ್ದಾರೆ. ಅವರ ಕಾಲಾವಧಿಯಲ್ಲಿ ಜೀವಿಸಿದ ನಾವೆಲ್ಲರೂ ಧನ್ಯರು. ನಿಮ್ಮ ಸಂಘಟನಾತ್ಮಕ ಶಕ್ತಿಯಿಂದ ಪಂ.ಪುಟ್ಟರಾಜ ಗವಾಯಿಗಳ ದೇವಸ್ಥಾನ ನಿರ್ಮಿಸಿ ಇಂತಹ ರಚನಾತ್ಮಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿರುವದು ಸಂತಸ ತಂದಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಪಂಡಿತ ಪುಟ್ಟರಾಜ ಸಮಾಜ ಸೇವಾ ಟ್ರಸ್ಟ್‌ನ ಅಧ್ಯಕ್ಷ ಶಿದ್ರಾಮಯ್ಯ ಗವಿಸಿದ್ಧಯ್ಯ ಕಟಗಿಹಳ್ಳಿಮಠ ವಹಿಸಿದ್ದರು. ಅತಿಥಿಗಳಾಗಿ ವಿರೂಪಾಕ್ಷಪ್ಪ ಗವಾಯಿಗಳು ಗುಡೂರ, ಎನ್.ಎಚ್. ನಾಗನೂರ, ಶಾಂತಣ್ಣ ಮುಳವಾಡ, ಸುನೀಲ ಮಲ್ಲಪ್ಪ ಚಿನ್ನಪೂರ, ಶಿವಪ್ಪ ಈರಪ್ಪ ಲಗಳಿ, ಶಿವಯ್ಯ ಬೆಳ್ಳೇರಿಮಠ, ಶ್ರೀ ಪಂಡಿತ ಪುಟ್ಟರಾಜ ಸಮಾಜ ಸೇವಾ ಟ್ರಸ್ಟ್‌ನ ಉಪಾಧ್ಯಕ್ಷ ಬಸನಗೌಡ ಬಿ.ಪಾಟೀಲ, ಕಾರ್ಯದರ್ಶಿ ಗಂಗನಗೌಡ ಬಿ.ಬೆಣಕಲ್, ಸಹಕಾರ್ಯದರ್ಶಿ ಈಶಪ್ಪ ವ್ಹಿ.ಅಂಗಡಿ, ಖಜಾಂಚಿ ಮಾಂತೇಶ ಲಗಳಿ, ಸದಸ್ಯರಾದ ಬಸವರಾಜ ದಾವಣಗೆರೆ, ಶರಣಪ್ಪ ಮೇಟಿ, ಭೀಮಪ್ಪ ಯ.ಮಕಾಶಿ, ಮಂಜುನಾಥ ಕ್ಯಾಡದ ಮುಂತಾದವರಿದ್ದರು.

ಎಸ್.ಬಿ. ದೊಡ್ಡಣ್ಣವರ ಕಾರ್ಯಕ್ರಮದ ನಿರೂಪಿಸಿದರು. ಗಂಗನಗೌಡ ಬೆಣಕಲ್ ವಂದಿಸಿದರು.



ಬಾಗಲಕೋಟ ಜಿಲ್ಲೆಯ ನಾವಲಗಿ ಗ್ರಾಮದ ಶಹನಾಯಿ ವಾದಕ ಮಾರುತಿ ಭಜಂತ್ರಿ ಹಾಗೂ ಗದಗ ನಗರದ ಮೃತ್ಯುಂಜಯ ಮಠದ ತಬಲಾ ವಾದನದ ಜುಗಲ್ ಬಂದಿ ಕಾರ್ಯಕ್ರಮ ಕಲಾಸಕ್ತರನ್ನು ಸೆಳೆಯಿತು. ವಿರೂಪಾಕ್ಷ ಗವಾಯಿಗಳು ಗುಡೂರ ಇವರ ಶಾಸ್ತ್ರೀಯ ಸಂಗೀತ, ಭಕ್ತಿ ಸಂಗೀತ, ಭಾವಗೀತೆಗಳು ಜನಮನ ರಂಜಿಸಿದವು. ಶ್ರೀ ವೀರೇಶ್ವರ ಪುಣ್ಯಾಶ್ರಮದ ಶಿಷ್ಯ-ಪ್ರಶಿಷ್ಯರಿಂದ ಸಂಗೀತ ಕಾರ್ಯಕ್ರಮ ಜರುಗಿತು.

ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿಯ ಬಸವರಾಜ ನವಲಗುಂದ ಮಾಹಿತಿ

# 'ಜನರ ನಡುವೆ ಜನತಾ ಪ್ರಣಾಳಿಕೆ' ಮಾ.5ಕ್ಕೆ



■ವಿಜಯಸಾಕ್ಷಿ ಸುದ್ದಿ, ಗದಗ

ಜನರ ನಡುವೆ ಜನತಾ ಪ್ರಣಾಳಿಕೆಯ ಚರ್ಚೆಯ ಕಾರ್ಯಕ್ರಮವು ಮಾರ್ಚ್ 5ರಂದು ಗದುಗಿನ ಡಾ. ಬಿ.ಆರ್. ಅಂಬೇಡ್ಕರ ಸಭಾಭವನದಲ್ಲಿ ನಡೆಸಲಾಗುವುದು ಎಂದು ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ಗದಗ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಯಲ್ಲಪ್ಪ ನವಲಗುಂದ ತಿಳಿಸಿದರು.

ನವ ಕರ್ನಾಟಕ ನಿರ್ಮಾಣ ಆಂದೋಲನ ಸಮಿತಿ ಆಶ್ರಯದಲ್ಲಿ ನಗರದ ಪತ್ರಿಕಾ ಭವನದಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರೊಂದಿಗೆ ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡುತ್ತಿದ್ದರು.

ಈ ಕಾರ್ಯಕ್ರಮಕ್ಕೆ ವಿವಿಧ ರಾಜಕೀಯ ಮುಖಂಡರು, ದಲಿತ, ರೈತ, ಕಟ್ಟಡ ಕಾರ್ಮಿಕ, ಕೂಲಿ ಕಾರ್ಮಿಕ, ಪರಿಸರ ಹೋರಾಟಗಾರರು ಕನ್ನಡ ಸಂಘಟನೆಗಳು, ದಲಿತ ಸಂಘಟನೆಗಳು, ವರ್ತಕರು, ಸಾಹಿತಿಗಳು, ಈ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಮಾಜಿ ಕೇಂದ್ರ ಸಚಿವರಾದ ಸಿ.ಎಂ. ಇಬ್ರಾಹಿಂ, ಮಾಜಿ ರಾಜ್ಯ ಸಚಿವರಾದ ಬಿ.ಟಿ. ಲಲಿತಾ ನಾಯಕ, ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ, ರಾಷ್ಟ್ರೀಯ ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ಸಂಯೋಜಕ ಗೋಪಿನಾಥ ಜಿ., ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ ಮಾರಚಂದ್ರ ಮುನಿಯಪ್ಪ, ಎಐಬಿಎಸ್ ರಾಜ್ಯ ಸಂಯೋಜಕ ಆರ್. ಮುನಿಯಪ್ಪ, ಡಿ.ಎಸ್.ಎಸ್‌ನ ಪಿ.ಎನ್. ಮೂರ್ತಿ ಸೇರಿದಂತೆ ಪ್ರಮುಖರಾದ ಮೋಹನರಾಜ, ಪುಟ್ಟರಾಜು, ಎಚ್.ಡಿ. ಬಸವರಾಜ, ಶಿವರಾಂ, ಆರ್.ಎಮ್.ಎನ್. ರಮೇಶ, ಡಾ. ದಸ್ತಗಿರಿ ಮುಲ್ಲಾ ಮುಂತಾದವರು ಪಾಲ್ಗೊಳ್ಳಲಿದ್ದು, ಕಾರ್ಯಕ್ರಮವನ್ನು ಅರ್ಥಗರ್ಭಿತವಾಗಿ ನಡೆಸಲಾಗುವುದು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶಂಕರಗೌಡ ಜಯನಗೌಡ, ಮಂಜುನಾಥ ಬುರ್ಲಿ, ಬಸವರಾಜ ವಡ್ಡರ, ಶಿವಯ್ಯ ಶಶಿಮಠ, ಯಮನಪ್ಪ ಭಜಂತ್ರಿ, ಬಸಪ್ಪ ವಡ್ಡರ, ಶಿವಕುಮಾರ ಅಳವಂಡಿ, ಕುಮಾರಸ್ವಾಮಿ ಅಳವಂಡಿ, ರಿಯಾಜ ಹೊಸಪೇಟೆ ಮುಂತಾದವರು ಉಪಸ್ಥಿತರಿದ್ದರು.

# ಕೆರೆಗೆ ಹಾರಿ 22 ವರ್ಷದ ಎಂಜಿನಿಯರಿಂಗ್ ಸ್ಟೂಡೆಂಟ್ ಸೂಸೈಡ್!

■ವಿಜಯಸಾಕ್ಷಿ ಸುದ್ದಿ, ಹಾವೇರಿ

ಹಾವೇರಿ ತಾಲೂಕಿನ ದೇವಗಿರಿ ಗ್ರಾಮದ ಬಳಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿ ಕೆರೆಗೆ ಹಾರಿ ಆತ್ಮಹತ್ಯೆಗೆ ಶರಣಾದ ಘಟನೆ ಜರುಗಿದೆ. 22 ವರ್ಷದ ಉಲ್ಲಾಸ್ ಮುರಳಿ ಆತ್ಮಹತ್ಯೆಗೆ ಶರಣಾದ ವಿದ್ಯಾರ್ಥಿ. ಉಲ್ಲಾಸ್ ಎಂಜಿನಿಯರಿಂಗ್ 4ನೇ ಸೆಮಿಸ್ಟರ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ. ಒಂದು ವಿಷಯದಲ್ಲಿ ಫೇಲ್ ಆಗಿದ್ದ ಎನ್ನಲಾಗಿದೆ. ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ಗ್ರಾಮಸ್ಥರು ಹಾಗೂ ಪೊಲೀಸರು ಮೃತದೇಹವನ್ನ ಹೊರಗೆ ತೆಗೆಯುವ ಕಾರ್ಯ ಮಾಡಿದ್ದಾರೆ. ಮೃತದೇಹವನ್ನ ಜಿಲ್ಲಾಸ್ಪತ್ರೆಗೆ ಸಾಗಿಸುವ ವೇಳೆಯಲ್ಲಿ ಪೊಲೀಸರು ಮಾನವೀಯತೆ ಮರೆತು ಕಸ ತುಂಬುವ ವಾಹನದಲ್ಲಿ ಸಾಗಾಟ ಮಾಡಿದ್ದಾರೆ. ಇದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಪ್ರಕರಣ ನಡೆದಿದೆ.

ನರಗುಂದದಲ್ಲಿ ಅ.ಭಾ.ವೀ ಮಹಾಸಭಾದ ಸದಸ್ಯತ್ವ ಅಭಿಯಾನ

# ಜಿಲ್ಲೆಯಲ್ಲಿ ಮಹಾಸಭಾ ಬಲವರ್ಧನೆಗೆ ಕ್ರಮ

■ವಿಜಯಸಾಕ್ಷಿ ಸುದ್ದಿ, ನರಗುಂದ

ಅಖಿಲ ಭಾರತ ವೀರಶೈವ ಮಹಾಸಭಾದ ಗದಗ ಜಿಲ್ಲಾ ಘಟಕದ ಆಜೀವ ಸದಸ್ಯರನ್ನು ಹೆಚ್ಚಿಸುವ ಮೂಲಕ ಮಹಾಸಭಾದ ಸಂಘಟನೆಯನ್ನು ಬಲವರ್ಧನೆಗೆ ಕ್ರಮ ಜರುಗಿಸಲಾಗಿದೆ ಎಂದು ಮಹಾಸಭಾದ ಜಿಲ್ಲಾಧ್ಯಕ್ಷ ಶರಣಬಸಪ್ಪ ಗುಡಿಮನಿ ಹೇಳಿದರು.

ಅವರು ಮಂಗಳವಾರ ನರಗುಂದದ ಪ್ರವಾಸಿ ಮಂದಿರದಲ್ಲಿ ನರಗುಂದ ತಾಲೂಕಾ ಮಹಾಸಭಾ ಘಟಕ ಏರ್ಪಡಿಸಿದ್ದ ಸದಸ್ಯತ್ವ ಅಭಿಯಾನ-ಸಂಘಟನ ಬಲವರ್ಧನೆ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಗದಗ ಜಿಲ್ಲೆಯ ಎಲ್ಲ ತಾಲೂಕಿನಲ್ಲಿ ಮಹಾಸಭಾದ ಸದಸ್ಯತ್ವವನ್ನು ಹೆಚ್ಚಿಸುವ, ಸಂಘಟನೆಯನ್ನು ಬಲಪಡಿಸುವ ಮೂಲಕ ಮಹಾಸಭಾವನ್ನು ಸಮಾಜಮುಖಿ ಕಾರ್ಯಕ್ಕೆ ಅಣಿಗೊಳಿಸುವ ಎಲ್ಲ ರೀತಿಯ ಪ್ರಯತ್ನಗಳು ಆಯಾ ತಾಲೂಕಿನ ಗುರು-ಹಿರಿಯರ, ಸಂಘಟನೆಯ ಪದಾಧಿಕಾರಿಗಳ ಹಾಗೂ ಸಮಾಜ ಮುಖಂಡರ ಮೂಲಕ ಮಾಡಲಾಗುತ್ತಿದ್ದು, ಇದಕ್ಕೆ ಸಮಾಜಬಾಂಧವರು ಸಹಕಾರ ನೀಡಬೇಕೆಂದರು.

ನರಗುಂದದಲ್ಲಿ ಹಿರಿಯರಾದ ಚನ್ನಬಸಪ್ಪ ಕಂಠಿ, ತಾಲೂಕಾಧ್ಯಕ್ಷರಾದ ಅಪ್ಪಣ್ಣ ನಾಯ್ಕರ್ ಅವರ ನೇತೃತ್ವದಲ್ಲಿ ಎಲ್ಲ ಪದಾಧಿಕಾರಿಗಳು, ನಿರ್ದೇಶಕರು ಸಂಘಟನೆಯನ್ನು ಬಲಗೊಳಿಸಬೇಕೆಂದು ವಿನಂತಿಸಿದ್ದು, ನೂರಕ್ಕೂ ಹೆಚ್ಚು ಮಹನೀಯರು ಮಹಾಸಭಾದ ಆಜೀವ ಸದಸ್ಯತ್ವ ಪಡೆದುಕೊಳ್ಳಲು ಮುಂದೆ ಬಂದಿರುವದು ಸಂತೋಷ ಎಂದು ಗುಡಿಮನಿ ಹೇಳಿದರು.

ನರಗುಂದ ತಾಲೂಕಾಧ್ಯಕ್ಷರಾದ ಅಪ್ಪಣ್ಣ ನಾಯ್ಕರ್, ಉಪಾಧ್ಯಕ್ಷ ಚನ್ನಬಸಪ್ಪ ಕಂಠಿ ಮಾತನಾಡಿ, ನರಗುಂದ ತಾಲೂಕಿನಲ್ಲಿ ಸಂಘಟನೆಯನ್ನು ಹೆಚ್ಚು ಕ್ರಿಯಾಶೀಲಗೊಳಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದ್ದು, ಇನ್ನೂ ಪ್ರಯತ್ನ ಮುಂದುವರೆಸುವದಾಗಿ ಹೇಳಿದರು.

ಸಭೆಯಲ್ಲಿ ಜಿಲ್ಲಾ ಘಟಕದ ಉಪಾಧ್ಯಕ್ಷ ಸಂಗಳಮಠ, ಕಾರ್ಯದರ್ಶಿ ಮುರುಘರಾಜೇಂದ್ರ ಬಡ್ನಿ, ಕೋಶಾಧ್ಯಕ್ಷ ಚನ್ನವೀರಪ್ಪ ಹುಣಶೀಕಟ್ಟಿ, ನಿರ್ದೇಶಕ ಶ್ರೀಶೈಲಪ್ಪ ಚಳಗೇರಿ ಸೇರಿದಂತೆ ನರಗುಂದ ತಾಲೂಕಾ ಘಟಕದ ಪದಾಧಿಕಾರಿಗಳು, ಹಿರಿಯರು ಉಪಸ್ಥಿತರಿದ್ದು ಸಲಹೆ-ಸೂಚನೆ ನೀಡಿದರು.




ಮುಂದಿನ ವಾರ ಮುಂಡರಗಿ, ಶಿರಹಟ್ಟಿ, ಲಕ್ಷ್ಮೇಶ್ವರ ತಾಲೂಕಿನಲ್ಲಿ ಮಹಾಸಭಾದ ಸದಸ್ಯತ್ವ ಅಭಿಯಾನ-ಸಂಘಟನ ಬಲವರ್ಧನೆ ಸಭೆಯನ್ನು ಹಮ್ಮಿಕೊಳ್ಳಲಾಗುವದು ಎಂದು ಕಾರ್ಯದರ್ಶಿ ಮುರುಘರಾಜೇಂದ್ರ ಬಡ್ನಿ ತಿಳಿಸಿದ್ದಾರೆ.

# ಇಂಜಿನ್‌ನಲ್ಲಿ ಏಕಾಏಕಿ ಬೆಂಕಿ ಅವಘಡ: ಹೊತ್ತಿ ಉರಿದ ಮಿನಿ ಟಿಪ್ಪರ್!

■ವಿಜಯಸಾಕ್ಷಿ ಸುದ್ದಿ, ಬೀದರ್

ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣದ ಚೆನ್ನಬಸವ ಆಶ್ರಮದ ಬಳಿ ಏಕಾಏಕಿ ಇಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಕ್ಷಣಾರ್ಧದಲ್ಲಿ ಮಿನಿ ಟಿಪ್ಪರ್ ಹೊತ್ತಿ ಉರಿದಿರುವ ಘಟನೆ ಜರುಗಿದೆ.



ಚಂದು ಎಂಬುವವರಿಗೆ ಸೇರಿದ ಮಿನಿ ಟಿಪ್ಪರ್ ಇದಾಗಿದ್ದು, ಕಿರಾಣಿ ಅಂಗಡಿಗಳಿಗೆ ಸಕ್ಕರೆ ಡೆಲಿವರಿ ಮಾಡುತ್ತಿದ್ದರು. ಮಂಗಳವಾರ ರೇಡಿಯಂ ಅಂಗಡಿ ಬಳಿ ನಿಲ್ಲಿಸಿದ್ದಾಗ ಮಿನಿ ಟಿಪ್ಪರ್‌ನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದ್ದು, ಧಗಧಗನೆ ಹೊತ್ತಿ ಉರಿದಿದೆ. ಚಾಲಕ ಅಗ್ನಿ ಅವಘಡದಿಂದ ಪಾರಾಗಿದ್ದು, ಮಿನಿ ಟಿಪ್ಪರ್ ಬಹುತೇಕ ಸುಟ್ಟು ಭಸ್ಮವಾಗಿದೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿಯನ್ನು ನಂದಿಸಿದ್ದಾರೆ.

ಶತಮಾನ ಕಂಡ ಪಿ.ಸಿ. ಶಾಬಾದಿಮಠ ಬುಕ್ ಡಿಪೋಗೆ

# 'ಓಂಕಾರ ಶ್ರೀ ಪ್ರಶಸ್ತಿ' ಪ್ರದಾನ

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿಯ ಮಲ್ಲಸಮುದ್ರ ಸಮೀಪದ ಓಂಕಾರೇಶ್ವರ ನಗರದಲ್ಲಿರುವ ಓಂಕಾರೇಶ್ವರ ಹಿರೇಮಠವು ರಾಜ್ಯಮಟ್ಟದಲ್ಲಿ ನೀಡುವ ಪ್ರತಿಷ್ಠಿತ 2025ನೇ ಸಾಲಿನ ಓಂಕಾರಶ್ರೀ ಪ್ರಶಸ್ತಿಗೆ ನಗರದ ಖ್ಯಾತ ಪುಸ್ತಕ ಸಂಸ್ಥೆ ಪಿ.ಸಿ. ಶಾಬಾದಿಮಠ ಬುಕ್ ಡಿಪೋ ಆಯ್ಕೆಯಾಗಿದೆ.

ಶಿವರಾತ್ರಿ ಪ್ರಯುಕ್ತ ಶ್ರೀ ಓಂಕಾರೇಶ್ವರಗಿರಿಯಲ್ಲಿ ಏರ್ಪಡಿಸಲಾದ ಮಹಾಶಿವರಾತ್ರಿ ಶಿವನ ಸಂಭ್ರಮ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಓಂಕಾರೇಶ್ವರ ಹಿರೇಮಠದ ಪರಮಪೂಜ್ಯರಾದ ಷ. ಬ್ರ. ಶ್ರೀ ಫಕೀರೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಶಾಬಾದಿಮಠ್ ಡಿಪೋದ ಪರವಾಗಿ ಪ್ರಸನ್ನ ಶಾಬಾದಿಮಠ ದಂಪತಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.



ಈ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ರಾಜೇಂದ್ರ ಗಡಾದ, ಹಾಲುಮತ ಸಮಾಜದ ಅಧ್ಯಕ್ಷ ರುದ್ರಣ್ಣ ಗುಳಿಗುಳಿ, ರೋಣದ ಧರ್ಮದರ್ಶಿಗಳಾದ ಜಗದೀಶ್ವರಸ್ವಾಮಿ ಹಿರೇಮಠ್, ನಿವೃತ್ತ ಪ್ರಾಚಾರ್ಯ ಬಿ.ಎಸ್. ಹಿರೇಮಠ, ಖ್ಯಾತ ವೈದ್ಯರಾದ ಡಾ. ಎನ್. ಎಸ್. ಬಿರಾದಾರ, ವಕೀಲರಾದ ವೀರೇಶ್ ಕೂಗುಮಠ, ಉದ್ಯಮಿ ಮಂಜುನಾಥ ಬೆಲೇರಿ, ಸಿದ್ದಲಿಂಗಪ್ಪ ಚಳಗೇರಿ, ಕಪ್ಪತ್ತಗಿರಿ ಫೌಂಡೇಶನ್‌ನ ಚಂದ್ರಕಲಾ ಇಟಗಿಮಠ, ನಿವೃತ್ತ ತಹಸೀಲ್ದಾರ್ ವೀರಬಸಪ್ಪ ರೇಷ್ಮೆ, ವೀರಶೈವ ಲಿಂಗಾಯತ ಸಮಾಜದ ಗದಗ ಜಿಲ್ಲಾಧ್ಯ ರಾಜು ಗುಡಿಮನಿ, ಯೋಗ ಗುರು ಎಸ್.ಎಸ್. ಹಿರೇಮಠ, ಆನಂದ ವೃದ್ಧಾಶ್ರಮದ ಗಂಗಾಧರ ನಭಾಪುರ್, ಕೃಷಿ ಪಂಡಿತ ಪುರಸ್ಕೃತರಾದ ಹನುಮಂತಪ್ಪ ಪಟ್ಟೇದ, ಶಿವಪ್ಪ ಅರುಹುಣಸಿ, ಶಿಕ್ಷಕರಾದ ವೈ.ಪಿ. ಅಡ್ನೂರು, ಶಿವಪುತ್ರಪ್ಪ ಹಂಪಿಹೊಳಿ, ಕಲಾವಿದರಾದ ಪೂಜಾ ಬೇವೂರ್, ಗೌಡಪ್ಪಗೌಡ ಬೊಮ್ಮಪ್ಪನವರ್, ಗವಿಸಿದ್ದಯ್ಯ ಹಳ್ಳಿಕೇರಿಮಠ, ಮಲ್ಲಿಕಾರ್ಜುನ್ ಭಜಂತ್ರಿ, ಶರಣಯ್ಯಶಾಸ್ತ್ರಿಗಳು ಶಿವಪ್ಪಯ್ಯನಮಠ, ಬಸವರಾ ಶೆಲಿಯಪ್ಪನವರ್, ಎಸ್.ಪಿ. ಕಲಾಲ್ ಮುಂತಾದವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ರಾಜೇಂದ್ರ ಗಡಾದ ಅಭಿನಂದನಾ ನುಡಿಗಳನ್ನಾಡಿ, ಮುದ್ರಣ ಮತ್ತು ಪ್ರಕಾಶನ ಕ್ಷೇತ್ರದಲ್ಲಿ ನೂರಕ್ಕೂ ಹೆಚ್ಚು ವರ್ಷಗಳ ಕಾಲ ಸಾಧನೆ ಮಾಡಿದ ಶಾಬಾದಿಮಠ ಬುಕ್ ಡಿಪೋ ರಾಜ್ಯ ದೇಶದಲ್ಲಿ ಅಷ್ಟೇ ಅಲ್ಲ, ತನ್ನ ಅಪರೂಪದ ಕ್ಯಾಲೆಂಡರ್‌ಗಳ ಮೂಲಕ ಜಗತ್ತಿನ ನಾನಾ ದೇಶಗಳಲ್ಲಿ ಜನಪ್ರಿಯವಾಗಿದೆ ಎಂದರು. ಹಿರಿಯ ವಕೀಲರಾದ ವೀರೇಶ್ ಕೂಗುಮಠ ಅವರು ಪ್ರಶಸ್ತಿ ಪತ್ರವನ್ನು ವಾಚಿಸಿದರು.


## ಗ್ರಾಮ ಪಂಚಾಯತ ಕಾರ್ಯಾಲಯ, ಬಿಂಕದಕಟ್ಟಿ

ತಾಲೂಕ :- ಗದಗ ಜಿಲ್ಲಾ:- ಗದಗ

ಸಂ.ಗ್ರಾ.ಪಂ. ಬಿ/ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ/ದರಪಟ್ಟಿ/2024-25 ದಿ: 04/03/2025

### : ದರಪಟ್ಟಿ ಪ್ರಕಟಣೆ :

ಅಧ್ಯಕ್ಷರು/ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಬಿಂಕದಕಟ್ಟಿ ಇವರು 2024- 25ನೇ ಸಾಲಿನ ಮಹಾತ್ಮಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಅವಶ್ಯಕವಿರುವ ಐಟಂವಾರು ಸಾಮಗ್ರಿ ಮೊತ್ತಕ್ಕೆ ಸಾಮಗ್ರಿಗಳನ್ನು ಪೂರೈಸಲು ನೋಂದಾಯಿತ ಅರ್ಹ ವೆಂಡರ್/ಏಜೆನ್ಸಿಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ದರಪಟ್ಟಿ ಸಲ್ಲಿಸುವವರು ಗ್ರಾಮ ಪಂಚಾಯತಿಯಿಂದ ಖುದ್ದಾಗಿ ಖಾಲಿ ಟೆಂಡರ್ ಫಾರಂಗಳನ್ನು ಪಡೆದು ಸಲ್ಲಿಸತಕ್ಕದ್ದು.

| ಕ್ರ.ಸಂ. | ಕಾಮಗಾರಿ ಹೆಸರು | ಟೆಂಡರ್ ಮೊತ್ತ | ಖಾಲಿ ಟೆಂಡರ್ ಫಾರಂ ಬೆಲೆ (ರೂ.ಗಳಲ್ಲಿ) | ಷರಾ |
|---|---|---|---|---|
| 1 | ಬಿಂಕದಕಟ್ಟಿ ಗ್ರಾಮದ ಮುಖ್ಯರಸ್ತೆಯಿಂದ ಈರುಳ್ಳಿ ಘಟಕದ ವರೆಗೆ ರಸ್ತೆ ನಿರ್ಮಾಣ. | 354825.71 | 500 | ಖಾಲಿ ಟೆಂಡರ್ ಗ್ರಾಮ ಪಂಚಾಯತಿಯಿಂದ ಪಡೆದು ಸಲ್ಲಿಸುವುದು. |
| 2 | ಬಿಂಕದಕಟ್ಟಿ ಗ್ರಾಮದ ಮಕಾಳಿಯವರ ಮನೆಯಿಂದ ಹುಚ್ಚಣ್ಣವರ ಜಾಗೆ ವರೆಗೆ ಸಿ ಸಿ ರಸ್ತೆ ನಿರ್ಮಾಣ. | 348263.92 | 500 | |

ಅರ್ಹ ವೆಂಡರ್/ಏಜೆನ್ಸಿಗಳಿಂದ ಖಾಲಿ ದರಪಟ್ಟಿ ಫಾರಂಗಾಗಿ ಅರ್ಜಿ ವಿತರಿಸುವ ದಿನಾಂಕ: 05/03/2025 ರಿಂದ 13/03/2025 ರವರೆಗೆ ಭರ್ತಿ ಮಾಡಿದ ದರಪಟ್ಟಿಗಳನ್ನು ಸ್ವೀಕರಿಸುವ ದಿನಾಂಕ: 14-03-2025 ಮುಂಜಾನೆ 10.00 ಗಂಟೆಯಿಂದ ಮಧ್ಯಾಹ್ನ 2.30 ಗಂಟೆವರೆಗೆ. ತೆರೆಯುವ ದಿನಾಂಕ ಹಾಗೂ ಸಮಯ: 14-03-2025 ರ ಮಧ್ಯಾಹ್ನ 3.00 ಗಂಟೆ

ನಿಬಂಧನೆಗಳು :

1) ಷರತ್ತು/ನಿಬಂಧನೆಗಳಿಗೆ, ಹೆಚ್ಚಿನ ಮಾಹಿತಿಗಾಗಿ ಕೆಲಸದ ದಿನಗಳಲ್ಲಿ ಹಾಗೂ ರಜಾ ದಿನಗಳನ್ನು ಹೊರತುಪಡಿಸಿಗ್ರಾಮ ಪಂಚಾಯತ ಬಿಂಕದಕಟ್ಟಿ ಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ ಆಗಿದೆ/-
**ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು**
ಗ್ರಾಮ ಪಂಚಾಯತಿ ಬಿಂಕದಕಟ್ಟಿ

ಸಹಿ ಆಗಿದೆ/-
**ಅಧ್ಯಕ್ಷರು**
ಗ್ರಾಮ ಪಂಚಾಯತಿ ಬಿಂಕದಕಟ್ಟಿ


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka